# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXIV - 12 ಡಿಸೆಂಬರ್ 2004

### ಈ ಸಂಚಿಕೆಯಲ್ಲಿ

ಅಸೋಸಿಯೇಷನ್‌ನಲ್ಲಿ :

ನೆನಪಿನಲ್ಲಿ ಉಳಿಯುವಂತಹ ಸಂಗೀತ ತರಬೇತಿ ಶಿಬಿರ • ನಾಗಭೂಷಣ 2

Forthcoming programmes 3

ವಿಸಂಗೀತ ಕಲಾನಿಧಿ ಆರ್.ಕೆ. ಶ್ರೀಕಂಠನ್ • ನಾಗಭೂಷಣ 4

ಪು.ತಿ.ನ. ಅವರ ಲಲಿತ ಪ್ರಬಂಧಗಳು • ಡಾ. ಜಿ. ಎನ್. ಉಪಾಧ್ಯ 6

ಕವನ

ನನ್ನ ಹಾಗೆಯೆ • ಸು. ರಂ. ಎಕ್ಕುಂಡಿ 8

ಮುಂಬಯಿ ಮತ್ತು ಮೈಸೂರು ಅಸೋಸಿಯೇಷನನ್ನು

ನಾನು ಮರೆಯಲು ಸಾಧ್ಯವೇ ಇಲ್ಲ'' - ವಿ.ಕೆ. ಮೂರ್ತಿ • ಬಿ. ನಾಗಭೂಷಣ್ 9

ಡಾ. ಸಾ. ಶಿ. ಮರುಳಯ್ಯನವರೊಂದಿಗೆ ಸಂದರ್ಶನ • ಎಂ. ವಿ. ನಾಗರಾಜರಾವ್ 11

Rs. 5/-

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

ಅಸೋಸಿಯೇಷನ್‌ನಲ್ಲಿ

# ನೆನಪಿನಲ್ಲಿ ಉಳಿಯುವಂತಹ ಸಂಗೀತ ತರಬೇತಿ ಶಿಬಿರ

ಮೈಸೂರು ಅಸೋಸಿಯೇಷನ್ ಕಳೆದ ಎರಡು ವರ್ಷಗಳಿಂದ ಸಂಗೀತ ತರಬೇತಿ ಶಿಬಿರವನ್ನು ನಡೆಸುತ್ತಾ ಬಂದಿದೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಡಾ. ಟಿ.ಎಸ್. ಸತ್ಯವತಿಯವರು ನಡೆಸಿಕೊಟ್ಟ ಮೈಸೂರು ಸದಾಶಿವರಾಯರ 'ಅಪರೂಪ ಕೃತಿಗಳ ಗಾಯನ ತರಬೇತಿ ಶಿಬಿರವು ಇನ್ನೂ ಎಲ್ಲರ ಮನಸ್ಸಿನಲ್ಲಿ ಹಸಿಯಾಗಿ ನಿಂತಿದೆ.

ಕಳೆದ ತಿಂಗಳು ನವೆಂಬರ್ 17ರಿಂದ ರ 27ವರೆಗೆ




ನಡೆಸಿದ ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರ ಮತ್ತು ತಿರುವಾಂಕೂರು ಮಹಾರಾಜ ಸ್ವಾತಿ ತಿರುನಾಳರ ಕೃತಿಗಳ ಗಾಯನ ತರಬೇತಿ ಶಿಬಿರವು ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆಯಿತು. ಕಾರಣ ಶಿಬಿರವನ್ನು ನಡೆಸಿಕೊಟ್ಟವರು ಕರ್ನಾಟಕ ಸುಪ್ರಸಿದ್ಧ ಹಿರಿಯ ವಿದ್ವಾಂಸರಾದ ಸಂಗೀತ ಕಲಾನಿಧಿ ಆರ್. ಕೆ. ಶ್ರೀಕಂಠನ್‌ರವರು.

### ಉದ್ಘಾಟನಾ ಸಮಾರಂಭ

ದಿನಾಂಕ 17-11-2004ರಂದು ಸುಪ್ರಸಿದ್ಧ ಸಂಗೀತಗಾರರೂ ಸಂಗೀತ ಶಾಸ್ತ್ರಜ್ಞರೂ ಆದ ಹೈದರಾಬಾದಿನ ಡಾ. ತಾಡೇಪಲ್ಲಿ ಲೋಕನಾಥ ಶರ್ಮರವರು ದೀಪವನ್ನು ಬೆಳಗಿಸಿ ಬೆಳಗಿಸಿ ಉದ್ಘಾಟಿಸಿದರು. ಡಾ. ಶರ್ಮರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ತಮಗೂ ಅಸೋಸಿಯೇಷನ್‌ಗೂ ಹಳೆಯ ನಂಟು ಇದೆಯೆಂದೂ, ಇಂದಿನ ಸಮಾರಂಭಕ್ಕೆ ತಾವು ಬಂದಿರುವುದು ತಮಗೆ ಹೆಮ್ಮೆಯಾಗಿದೆಯೆಂದೂ ಹೇಳಿ, ವಾಗ್ಗೇಯಕಾರರ ಗಾಯನದ ಶಿಬಿರಗಳನ್ನು ಏರ್ಪಡಿಸುವುದರ ಅವಶ್ಯಕತೆ ಇದೆಯೆಂದು ತಿಳಿಸಿ, ಈ ದಿಶೆಯಲ್ಲಿ ಕೆಲಸ ಮಾಡುತ್ತಿರುವ ಅಸೋಸಿಯೇಷನ್ ಚಟುವಟಿಕೆಗಳನ್ನು ಪ್ರಶಂಸಿಸಿ ತಾವು ಮುಂದೆಯೂ ಸಹಕರಿಸುವುದಾಗಿ ಭರವಸೆ ಇತ್ತರು, ಯೋಜನೆಗೆ ಯಶಸ್ಸನ್ನು ಹಾರೈಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಅಸೋಸಿಯೇಷನ್ ಉಪಾಧ್ಯಕ್ಷರಾದ ಡಾ. ಹೆಚ್ ಎಸ್. ಶ್ರೀನಿವಾಸ್, ಹಾಗೂ ವಿದ್ವಾನ್ ಆರ್. ಕೆ. ಶ್ರೀಕಂಠನ್ ಮತ್ತು ವಿದ್ವಾನ್ ಆರ್.ಎಸ್. ರಮಾಕಾಂತ್‌ರವರೂ ಸಹ ದೀಪ ಪ್ರಜ್ವಲಿಸಿದರು.

ಆರಂಭದಲ್ಲಿ ಶ್ರೀಮತಿ ರಮಾವಸಂತ್ ಎಲ್ಲರನ್ನು ಸ್ವಾಗತಿಸಿದರು. ಶ್ರೀಮತಿ ಲಕ್ಷ್ಮೀ ಸೀತಾರಾಂ ಅತಿಥಿಗಳನ್ನು ಪರಿಚಯಿಸಿದರು.




ಅಂದಿನಿಂದಲೇ ಪ್ರಾರಂಭವಾದ ಸಂಗೀತ ತರಬೇತಿ ಶಿಬಿರವು 28 ವಿದ್ಯಾರ್ಥಿಗಳನ್ನೊಳಗೊಂಡಿತ್ತು. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ತರಗತಿಗಳು ನಡೆದುವು. ಗಾಯನದ ತರಬೇತಿಗೆ ವಿದ್ವಾನ್ ಆರ್. ಕೆ. ಶ್ರೀ ಕಂಠನ್ ಆಯ್ದುಕೊಂಡಿದ್ದ ಕೃತಿಗಳು:- ಶ್ರೀ ಪುರಂದರದಾಸರ ವಂದಿಸುವುದಾದಿಯಲಿ ಗಣನಾಥನ (ನಾಟಿ) ಆಡಿದನೋ ರಂಗ (ಆರಭಿ) ಕಥಾಶ್ರವಣ ಮಾಡೋ (ರೀತಿಗೌಳ) ಜಯತುಗೋಕುಲವಾಸ (ಭೈರವಿ) ಸ್ಮರಿಸುವ ಜನಕೆಲ್ಲಾ (ಸುರುಟಿ). ಶ್ರೀ ಸ್ವಾತಿ ತಿರುನಾಳ ಪರಮಾನಂದ (ಕೇದಾರ) ಪಾಲಯಮಾಂ (ನಾಯಕಿ) ಶ್ರೀ ರಾಮಚಂದ್ರಜನನೀ (ಶುದ್ಧ ಸಾವೇರಿ) ಆಂಜನೇಯ (ಸಾವೇರಿ)

### ಸಮಾರೋಪ ಸಮಾರಂಭ

ದಿನಾಂಕ 27-11-2004ರಂದು ಸಮಾರೋಪ ದಿನವಂದು ಸಂಗೀತ ಶಿಬಿರದ ವಿದ್ಯಾರ್ಥಿಗಳಿಂದ ಗಾಯನ ನಡೆಯಿತು. ವಿದ್ವಾನ್ ಆರ್.ಎಸ್. ರಮಾಕಾಂತ್‌ರವರು ನಿರ್ವಹಣೆ ಮಾಡಿದರು ವಿದ್ಯಾರ್ಥಿಗಳು ಶ್ರುತಿ, ಲಯ, ಭಾವಗಳಿಂದ ಸಾದರ ಪಡಿಸಿದ ಗಾಯನವು ರಸಿಕರೆಲ್ಲರ ಮೆಚ್ಚುಗೆ ಪಡೆಯಿತು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೆಲ್ಲರೂ ಭಕ್ತಿಯಿಂದ ಗುರುಗಳಿಗೆ ಫಲ, ತಾಂಬೂಲ, ಸಹಿತವಾಗಿ ಗುರುದಕ್ಷಿಣೆಯನ್ನರ್ಪಿಸಿ ಸತ್ಕರಿಸಿದ ಸನ್ನಿವೇಶವು ಹೃದಯ ಸ್ಪರ್ಶಿಯಾಗಿತ್ತು. ''ಒಂದು ಕೀರ್ತನೆಯನ್ನು ಕಲಿಯಲು 15 ದಿನಗಳು ಬೇಕಾಗುತ್ತದೆ. ಅಂತಹುದರಲ್ಲಿ ಈ ವಿದ್ಯಾರ್ಥಿಗಳೆಲ್ಲರೂ ಹತ್ತು ದಿನಗಳಲ್ಲಿ ಹತ್ತು ಕೀರ್ತನೆ ಕಲಿತು ಸಾದರ ಪಡಿಸಿದುದು ಪ್ರಶಂಸನೀಯ'' ಎಂದು ವಿದ್ವಾನ್ ಆರ್. ಕೆ. ಶ್ರೀಕಂಠನ್ ಮೆಚ್ಚುಗೆ ವ್ಯಕ್ತ ಪಡಿಸಿದರಲ್ಲದೆ ಎಲ್ಲಾ ವಿದ್ಯಾರ್ಥಿಗಳು ಒಟ್ಟಿಗೆ ಆಗಾಗ್ಗೆ ಸೇರಿ ಸಾಮೂಹಿಕವಾಗಿ ಹಾಡಿಕೊಂಡರೆ ಕಲಿಸಿದ್ದಕ್ಕೆ ಮತ್ತು ಕಲಿತದ್ದಕ್ಕೆ ಸಾರ್ಥಕವಾಗುತ್ತದೆ ಎಂದು ಉಪದೇಶಿಸಿ ಇಂತಹ ಒಂದು ಅವಕಾಶ ಒದಗಿಸಿ ಕೊಟ್ಟದ್ದಕ್ಕಾಗಿ ಅಸೋಸಿಯೇಷನ್ ತಾವು ಕೃತಜ್ಞರು ಎಂದು ತಿಳಿಸಿದರು. ಅಸೋಸಿಯೇಷನ್ ಪರಿಯಿಂದ ಪುಷ್ಪಗುಚ್ಛ ಮತ್ತು ಸ್ಮರಣಿಕೆಗಳನ್ನು ಕೋಶಾಧಿಕಾರಿ ಶ್ರೀ ವಸಂತ್‌ರವರು ವಿದ್ವಾನ್ ಆರ್. ಕೆ. ಶ್ರೀ ಕಂಠನ್ ವಿದ್ವಾನ್ ಆರ್.ಎಸ್. ರಮಾಕಾಂತ್‌ರವರಿಗೆ ನೀಡಿ ಸತ್ಕರಿಸಿದರು. ವಿದ್ಯಾರ್ಥಿ ವೃಂದದಿಂದ ಕೆಲವರು ತಮ್ಮ ಸಿಹಿ ಅನುಭವಗಳನ್ನು ಹಂಚಿಕೊಂಡರು. ಆರಂಭದಲ್ಲಿ ಶ್ರೀಮತಿ ಲಕ್ಷ್ಮೀ ಸೀತಾರಾಂ ಎಲ್ಲರನ್ನು ಸ್ವಾಗತಿಸಿದರು. ಶ್ರೀ ನಾಗಭೂಷಣ್ ಅಸೋಸಿಯೇಷನ್ ಚಟುವಟಿಕೆಗಳ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಭವಾನಿ ಭಾರ್ಗವ್ ವಂದನಾರ್ಪಣೆ ಮಾಡಿದರು. ಶ್ರೀಮತಿ ರಮಾವಸಂತ್ ಕಾರ್ಯನಿರ್ವಹಣೆ ಮಾಡಿದರು.

- ನಾಗಭೂಷಣ

## FORTHCOMING PROGRAMMES

| | | |
|---|---|---|
| 31.12.2004 | 7.00 p.m | **New Year's Eve - Get-together** |
| | | Variety Entertainment |
| | | Members and their children can present any item of their choice. There is no age bar. Those desirous of participating may please contact the office for details. |
| | | Raffle |
| | | Dinner - Sponsored |
| | | Housie |
| | | Welcome new year 2005 at 12.00 midnight & then disperse |
| 08.01.2005 | 7.00 p.m. | **Endowment Lecture Series** |
| & | | |
| 09.01.2005 | 10.00 a.m. | Speaker : **Vidwan Ganesh Ashtavadhani** |
| 16.01.2005 | | **Sports Day** |
| 19.01.2005 | 7.00 p.m. | **Theatre Festival** |
| to 22.01.2005 | | G. B. Joshi Shatamanotsav |
| | | **Three Plays** |
| | | Kadadida Neeru by Dharwad Troupe |
| | | Sattavara Neralu by Benaka Group, Bangalore |
| | | Nane Bijjala by Nataranga Group, Bangalore |
| | | **Seminar on G.B. Joshi's Life & Works** |
| 26.01.2005 | 10.00 a.m. | **Republic Day - Flag Hoisting** |

## SPORTS DAY EVENTS - 16TH JANUARY 2005

Venue : **N.K.E.S. High School Grounds**

Time : 10.00 a.m. onwards

**Age : Below 5 years (Kids)**

Eventc :

1. Running Race
2. Hit a Target
3. Eating the biscuit

**Age : 6 years to 9 years**

Events :

1. Running Race
2. Hit a Target
3. Book Balancing

**Age : 10 years to 13 years**

Events :

1. Running Race
2. Potato Race
3. Throwing the Cricket Ball

**Age : 14 years to 18 years**

Events :

1. Running Race
2. Potato Race
3. Aiming the wicket

**Age 19 years to 25 years**

Events :

1. Running Race
2. Shot Put
3. Book Balancing

**Age 26 years to 40 years**

Events :

1. Brisk Walking
2. Book Balancing
3. Shot Put

**Age 40 years to 50 years**

Events :

1. Brisk Walking
2. Lemon & Spoon
3. Aiming the Wicket

**Age 50 years to 60 years**

Events :

1. Brisk Walking
2. Book Balancing
3. Lemon & Spoon

**Age 60 years & Above (Seniors)**

Events :

1. Brisk Walking
2. Book Balancing
3. Lemon & Spoon

**Musical Chair for all in two groups :**

★ 5 years to 20 years

★ 21 years above

If any age group has less than 5 contestants, the events will be cancelled.

Lunch will be served at Association after all the events.


**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For INDIAN AIRLINES & JET AIRLINES**

2/16, KABBUR HOUSE,
SION (E),
MUMBAI-400 022.
PHONES : 2407 2984 * 2409 3573
2407 7750




### ASSOCIATION GANAPATHI NITYA POOJA

The donation for Nitya Pooja has been increased from Rs. 1,000/- to Rs. 1,500/- per pooja as the cost of all items have gone up. Those who have already donated may contribute the difference. The new donors may please note that they have to donate Rs. 1,500/-

## ಸಂಗೀತ ಮತ್ತು ಸಾಹಿತ್ಯ ನನ್ನ ಪಾಲಿನ ದೈವ ಅವುಗಳ ಸೇವೆಯನ್ನು ಭಕ್ತಿ ಭಾವದಲ್ಲಿ ನಡೆಸಿಕೊಂಡು ಬರುತ್ತಿದ್ದೇನೆ.

# - ಸಂಗೀತ ಕಲಾನಿಧಿ ಆರ್.ಕೆ. ಶ್ರೀಕಂಠನ್

ಮೈಸೂರು ಅಸೋಸಿಯೇಷನ್ ಅವರು ಏರ್ಪಡಿಸಿದ್ದ ಶ್ರೀ ಪುರಂದರ ದಾಸ ಮತ್ತು ಮಹಾರಾಜ ಸ್ವಾತಿ ತಿರುನಾಳರ ಕೃತಿಗಳ ಗಾಯನ ತರಬೇತಿ ಶಿಬಿರವನ್ನು ನಡೆಸಿಕೊಡಲು ಆಗಮಿಸಿದ್ದ ಸಂಗೀತ ಕಲಾನಿಧಿ ಆರ್. ಕೆ. ಶ್ರೀ ಕಂಠನ್‌ರವರ ಸಂದರ್ಶನ



ಪಡೆಯುವ ಸುಯೋಗ ಲಭಿಸಿತು.

ಕಳೆದ 6 ದಶಕಗಳಿಂದ ಕರ್ನಾಟಕ ಸಂಗೀತ ವೇದಿಕೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯಿಂದ ಪರಿಣಾಮಕಾರಿಯಾಗಿ ರಾರಾಜಿಸುತ್ತಿರುವ ಶ್ರೀ ಶ್ರೀ ಕಂಠನ್‌ರವರು ದೇಶಾದ್ಯಂತ ರಸಿಕರ ಗೌರವಕ್ಕೆ ಪಾತ್ರರಾಗಿದ್ದಾರೆ.

ಸಂದರ್ಶನದ ಸಾರಾಂಶ :

★ ತಾವು ತಮ್ಮ ಪ್ರತಿಭೆ ಮತ್ತು ವಿದ್ವತ್ತಿನಿಂದ ಸಂಗೀತ ಪ್ರಪಂಚದಲ್ಲಿ ಚಿರಪರಿಚಿತರಾಗಿ ಎಲ್ಲರ ಗೌರವಾದರಗಳಿಗೆ ಪಾತ್ರರಾಗಿದ್ದೀರಿ. ಇಂದಿನ ಪೀಳಿಗೆಗೆ ತಮ್ಮ ಪೂರ್ವೋತ್ತರ ಪರಿಚಯ ಅಷ್ಟಾಗಿ ಇಲ್ಲದಿರುವುದರಿಂದ ತಮ್ಮ ಹಿಂದಿನ ದಿನಗಳ ವ್ಯಾಸಂಗ, ಸಾಧನೆಗಳ ಬಗ್ಗೆ ತಿಳಿಸಬೇಕಾಗಿ ವಿನಂತಿ.

- ಅಗತ್ಯವಾಗಿ. ನನ್ನ ಸ್ಥಳ ರುದ್ರಪಟ್ಟಣ. ಪಂಡಿತ ಕೃಷ್ಣಶಾಸ್ತ್ರಿ ನಮ್ಮ ತಂದೆಯವರು. ತಾಯಿ ಸಣ್ಣಮ್ಮ. ನಮ್ಮ ತಂದೆ ಸಂಸ್ಕೃತ, ಕನ್ನಡ ಭಾಷಾ ವಿದ್ವಾಂಸರು. ಸಂಗೀತ, ಹರಿಕಥೆ, ಚಿತ್ರಕಲೆಯಲ್ಲಿ ಪರಿಣಿತರಾಗಿದ್ದರು. ಪ್ರತಿ ಶನಿವಾರ ಮನೆಯಲ್ಲಿ ನಡೆಯುತ್ತಿದ್ದ ಭಜನೆಯಲ್ಲಿ ಹಾಡುತ್ತಿದ್ದೆ. ನನ್ನ ಆರಂಭ ಸಂಗೀತ ಶಿಕ್ಷಣ ನಮ್ಮ ತಂದೆಯವರಿಂದ. ನಂತರ ನಮ್ಮ ಅಣ್ಣ ಆರ್.ಕೆ. ವೆಂಕಟರಾಮ ಶಾಸ್ತ್ರಿಯವರಿಂದ. ನಮ್ಮದು ನಾದಬ್ರಹ್ಮಶ್ರೀ ತ್ಯಾಗರಾಜರ ಪರಂಪರೆ. ಆದ್ದರಿಂದ ಗುರುವಿನ ಅನುಗ್ರಹದಿಂದ ಸಂಗೀತ ಬೇಗನೆ ಒಲಿಯಿತು. ಬಿಡಾರಂ ಕೃಷ್ಣಪ್ಪ ರಾಮ ಮಂದಿರದ ಸಂಗೀತೋತ್ಸವದಲ್ಲಿ ಕೇಳುವಿಕೆ ಮತ್ತು ಪಾಲ್ಗೊಳ್ಳುವಿಕೆಯಿಂದ ನನ್ನದೆ ಆದ ಶೈಲಿಯನ್ನು ರೂಪಿಸಿಕೊಂಡೆ. ಮೈಸೂರು ವಿಶ್ವವಿದ್ಯಾಲಯದ ಬಿ.ಎ. ಪದವಿ 1946ರಲ್ಲಿ ಪಡೆದ ಮೇಲೆ 1949ರಲ್ಲಿ ಮೈಸೂರು ಆಕಾಶವಾಣಿಯಲ್ಲಿ ಕೆಲಸಕ್ಕೆ ಸೇರಿದೆ. 1954ರಲ್ಲಿ ಮೈಸೂರು ಆಕಾಶವಾಣಿ ಬೆಂಗಳೂರಿಗೆ ವರ್ಗಾಯಿಸಿದ್ದರಿಂದ ಬೆಂಗಳೂರಿನಲ್ಲಿ ನೆಲೆಸಿದೆ. 32 ವರ್ಷ ಸೇವೆ ಸಲ್ಲಿಸಿ ಸಂಗೀತ ಕಾರ್ಯಕ್ರಮಗಳ ನಿರ್ಮಾಪಕನಾಗಿ ನಿವೃತ್ತನಾದೆ. ಈ ಅವಧಿಯಲ್ಲಿ ನಾನು ರೂಢಿಸಿಕೊಂಡಿದ್ದು ಅಧ್ಯಯನ ಮತ್ತು ಅಧ್ಯಾಪನ.

★ ಸಂಗೀತ ಕಲಾವಿದರಲ್ಲಿ ಇರಬೇಕಾದ ಲಕ್ಷಣಗಳೇನು?

- ಶುಚಿ ರುಚಿಯಾದ ಮನಸ್ಸು, ಕಲೆಯ ಅಭ್ಯಾಸದಲ್ಲಿ ನಿಷ್ಠೆ, ಸತತ ಸಾಧನೆ, ಸದ್ಗುರುವಿನ ಮಾರ್ಗದರ್ಶನ, ಗುರುಹಿರಿಯರಲ್ಲಿ ಭಕ್ತಿ, ಮುಖ್ಯವಾಗಿ ಕಲಾವಿದರಲ್ಲಿ ಶಾರೀರಿಕ ಮತ್ತು ಮಾನಸಿಕ ಆರೋಗ್ಯ ಇರಬೇಕು.

★ ತಾವು 6 ದಶಕಗಳಿಂದಲೂ ವೇದಿಕೆಯ ಮೇಲೆ ಪ್ರಜ್ವಲಿಸುತ್ತಿರುವಿರಿ. ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಏನಾದರೂ ವ್ಯತ್ಯಾಸವಿದೆಯೇ?

- ರಸಾಭಿಮಾನಿಗೆ ಸಂಗೀತದಲ್ಲಿ ಇದು ಹಳೆಯದು, ಇದು ಹೊಸದು ಎಂಬ ವಿವೇಚನೆ ಸಲ್ಲದು. ಕಲೆಯ ದೃಷ್ಟಿಯಿಂದ ರಸ ಆಸ್ವಾದನೆ ದೃಷ್ಟಿಯಿಂದ ಸಂಗೀತಕ್ಕೆ ಕಾಲದ ಪ್ರಶ್ನೆ ಅಂದರೆ ಹಳೆಯ ಹೊಸ ತರಹ ಎಂಬುದ ಅಪ್ರಕೃತ ಸಂಗೀತಕ್ರಮ ಯಾವುದೇ ಆಗಿರಲಿ ರಸಾಸ್ವಾದನೆಯಾಗುವುದೆ ಎಂಬುದನ್ನು ಪರಿಗಣಿಸಬೇಕು.

★ ಶಾಸ್ತ್ರೀಯ ಸಂಗೀತಕ್ಕೂ ಸುಗಮ ಸಂಗೀತಕ್ಕೂ ಇರುವ ವ್ಯತ್ಯಾಸವೇನು?

- ಸುಗಮ ಸಂಗೀತದಲ್ಲಿ ಕಟ್ಟುಪಾಡುಗಳು ಕಡಿಮೆ. ಸಾಹಿತ್ಯಕ್ಕೆ ಅನುಗುಣವಾಗಿ ಸಂಗೀತವನ್ನು ಹೊಂದಿಸುತ್ತಾರೆ. ಶಾಸ್ತ್ರೀಯ ಸಂಗೀತದಲ್ಲಿ ಗಾನ ರಸವೇ ಪ್ರಧಾನ.

★ ಇತ್ತೀಚೆಗೆ ಕರ್ನಾಟಕ, ಹಿಂದೂಸ್ತಾನೀ, ಪಾಶ್ಚಿಮಾತ್ಯ, Fushion ಸಂಗೀತಗಳನ್ನು ಮಿಶ್ರಣ ಮಾಡುವ ಪ್ರವೃತ್ತಿ ಪ್ರಾರಂಭವಾಗಿದೆ. ನಿಮ್ಮ ಅಭಿಪ್ರಾಯ ಏನು?

- ಪ್ರತಿಯೊಂದು ಸಂಗೀತಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇರುತ್ತದೆ. ಕೇವಲ ಮನರಂಜನೆ ದೃಷ್ಟಿಯಿಂದ ಸಂಗೀತವನ್ನು ಹೀಗೆ ಮಿಶ್ರಣ ಮಾಡುವುದರಿಂದ ಯಾವ ಸಂಗೀತವೂ ವೃದ್ಧಿಯಾಗುವುದಿಲ್ಲ. ಆಯಾ ಸಂಗೀತವನ್ನು ಆಳವಾಗಿ ಅಭ್ಯಸಿಸಿ ಅದರಲ್ಲಿರುವ ಜೀವಾಳವನ್ನು ಹೊರಗೆಡುಹಿ ಸಾದರ ಪಡಿಸಿದರೆ ಆ ಸಂಗೀತಕ್ಕೆ ನ್ಯಾಯವನ್ನು ಒದಗಿಸಿಕೊಟ್ಟಂತಾಗುತ್ತದೆ.

★ ಮತ್ತೊಂದು ಮುಖ್ಯವಾದ ಪ್ರಶ್ನೆ. ಕರ್ನಾಟಕ ಸಂಗೀತ ಪ್ರೇಮಿ ಶ್ರೋತೃಗಳು ಹಿಂದೂಸ್ತಾನೀ ಸಂಗೀತವನ್ನೂ ಆಲಿಸುತ್ತಾರೆ. ಆದರೆ ಹಿಂದೂಸ್ತಾನೀ ಸಂಗೀತ ಪ್ರೇಮಿಶ್ರೋತೃಗಳು ಕರ್ನಾಟಕ ಸಂಗೀತವನ್ನು ಕೇಳುವುದೇ ಇಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯ?

- ನಾನು ಮೊದಲೇ ತಿಳಿಸಿದಂತೆ ರಸಾಸ್ವಾದನೆಯೇ ಮುಖ್ಯ. ಸಂಗೀತ ಯಾವುದಾದರೇನು? ಎಲ್ಲಾ ಸಂಗೀತಗಳ ಶ್ರೋತೃಗಳಿಗೆ ಈ ಒಂದು ಉದಾತ್ತ ಭಾವನೆ ಬರಬೇಕು. ಕರ್ನಾಟಕ ಸಂಗೀತಕ್ಕೆ ತನ್ನದೇ ಆದ ವೈಶಿಷ್ಟ್ಯತೆ, ವೈವಿಧ್ಯತೆ, ವೈಖರಿ ಇದೆ. ಇದನ್ನು ಬೇರೆ ಶ್ರೋತೃಗಳಿಗೆ ಪರಿಚಯಿಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಈ ದಿಸೆಯಲ್ಲಿ ಸಂಗೀತಗಾರರು, ಸಾರ್ವಜನಿಕ ಸಂಸ್ಥೆಗಳು, ಶ್ರೋತೃಗಳು ಒಂದುಗೂಡಿ ಕೆಲಸ ಮಾಡಬೇಕು.

★ ಇಂದಿನ ಮಾಧ್ಯಮಗಳು ಶಾಸ್ತ್ರೀಯ ಸಂಗೀತದ ಬಗ್ಗೆ ಯಾವ ರೀತಿ ಪ್ರೋತ್ಸಾಹ ಕೊಡುತ್ತಿವೆ?

- ಪ್ರೋತ್ಸಾಹ ಏನೇನೂ ಸಾಲದು. ರೇಡಿಯೋ ಮತ್ತು ಟಿ.ವಿ.ಗಳು ಪ್ರತಿನಿತ್ಯ ಮುಂಜಾನೆ ಮತ್ತು ಸಂಜೆ ಒಂದು ಗಂಟೆ ಹೊತ್ತು ಶಾಸ್ತ್ರೀಯ ಸಂಗೀತಕ್ಕೆ ಅವಕಾಶ ಮಾಡಿಕೊಡಬೇಕು. ಪತ್ರಿಕೆಗಳವರೂ ಸಹ ಪ್ರತಿ ದಿನ ಸಾಂಸ್ಕೃತಿಕ ಕಾರ್ಯಕ್ರಮದ ವರದಿ

ಮಾಡಬೇಕು. ಇದರಿಂದ ಯುವ ಪೀಳಿಗೆಗೆ ಪ್ರೋತ್ಸಾಹ ದೊರೆತು ಮುಂದೆ ನಮ್ಮ ಕಲೆ, ಸಂಸ್ಕೃತಿಗಳು ವೃದ್ಧಿಯಾಗಲು ಸಹಕಾರಿಯಾಗುತ್ತದೆ.

**★ ಸಂಗೀತ ಶಿಕ್ಷಣದ ಬಗ್ಗೆ ತಾವು ಯಾವ ರೀತಿ ಸ್ಪಂದಿಸುತ್ತೀರಿ?**

- ಇಂದಿನ ಯುವ ಪೀಳಿಗೆಯ ಆಸಕ್ತಿ ಮತ್ತು ಅಭಿರುಚಿ ತೀರಾ ಸಾಮಾನ್ಯ ದರ್ಜೆಯ ಮನರಂಜನೆ ಕಡೆ ತಿರುಗುತ್ತಿದೆ. ಇದು ಅಪಾಯಕಾರಿ. ಇದಕ್ಕೆ ಪರಿಹಾರ ಸರ್ಕಾರ, ಸಾರ್ವಜನಿಕರು ಒಂದಾಗಿ ಯುವ ಜನಾಂಗಕ್ಕೆ ಶಾಸ್ತ್ರೀಯ ಸಂಗೀತದ ಕಡೆ ಅಭಿರುಚಿ ಬರುವಂತೆ ಮಾಡಬೇಕು. ಸಂಗೀತ ಶಿಕ್ಷಣವನ್ನು ಕಡ್ಡಾಯ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು ಬರುತ್ತದೆ. ಆಸಕ್ತಿಯೂ ಉಂಟಾಗುತ್ತದೆ.

**★ ಮತ್ತೊಂದು ಪ್ರಶ್ನೆ ಶ್ರೀ ಪುರಂದರದಾಸರಿಂದ ಮೊದಲುಗೊಂಡು, ತ್ರಿಮೂರ್ತಿಗಳವರೆಗೂ ಅವರು ರಚಿಸಿರುವ ಕೃತಿಗಳೇ ಯಥೇಚ್ಛವಾಗಿದ್ದು ಕಲಿಯಲು ಬಹಳವಿರುವುದರಿಂದ ಹೊಸ ಕೃತಿ ರಚನೆಯ ಆವಶ್ಯಕತೆ ಇದೆಯೇ? ಹಾಗಿದ್ದರೆ ಅವುಗಳ ಭವಿಷ್ಯ ಏನು?**

- ವಾಗ್ಗೇಯಕಾರರೆಂದರೆ ದೇವಾಂಶ ಸಂಭೂತರು. ಕೃತಿ ರಚನೆ ಮಾಡುವವರಿಗೆ ಭಾಷಾ ಜ್ಞಾನ, ಸಾಹಿತ್ಯ ಜ್ಞಾನ, ಸಂಗೀತ ಶಾಸ್ತ್ರದಲ್ಲಿ ಅಪರಿಮಿತವಾದ ಜ್ಞಾನ, ಕೃತಿ ರಚನೆಯ ಬಗ್ಗೆ ವ್ಯಾಕರಣಜ್ಞಾನ ಇವೆಲ್ಲಾ ಇರಬೇಕು. ಅವರ ಕೃತಿಗಳನ್ನು ವಿದ್ವಾಂಸರು ಸ್ವಾಗತಿಸಬೇಕು. ಇವೆಲ್ಲವೂ ಹಿಂದಿನ ವಾಗ್ಗೇಯ ಕಾರರಿಗೆ ಇದ್ದುದರಿಂದಲೇ ನೂರಾರು ವರ್ಷಗಳಾದರೂ ಅವರ ಕೃತಿಗಳು ತಮ್ಮ ಘನತೆಯನ್ನು ಉಳಿಸಿಕೊಂಡಿವೆ. ಮತ್ತು ಇನ್ನೂ ಹೆಚ್ಚುತ್ತಾ ಹೋಗುತ್ತಿದೆ.

**★ ಈಗಿರುವ ಸಂಗೀತ ವಿದ್ವಾಂಸರುಗಳಲ್ಲಿ ನೀವು ಅತ್ಯಂತ ಹಿರಿಯರಾಗಿದ್ದೀರಿ. ಇಂದಿನ ಯುವ ಪೀಳಿಗೆಗೆ ನಿಮ್ಮ ಸಂದೇಶವೇನು?**

- ಕರ್ನಾಟಕ ಸಂಗೀತ ಕಲೆ ಭಾರತೀಯ ಸಂಸ್ಕೃತಿಯ ಪರಂಪರೆ. ಅದನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ಶ್ರದ್ಧೆ, ಆಸಕ್ತಿ, ಸಾಧನೆ, ಗುರುಭಕ್ತಿ, ಅತ್ಯಾವಶ್ಯಕ. ಇವೆಲ್ಲವನ್ನೂ ಮೈಗೂಡಿಸಿಕೊಂಡು ಉತ್ತಮ ಕಲಾವಿದರಾಗಿ ಭಾರತೀಯತನವನ್ನು ವಿಶ್ವದಲ್ಲೆಲ್ಲಾ ಪಸರಿಸುವಂತೆ ಮಾಡುವಂತಾಗ ಬೇಕೆಂಬುದೇ ನನ್ನ ಆಶಯ. ಹಾಗಾಗಲೆಂದು ಹಾರೈಸುತ್ತೇನೆ.

(ತಾವು ಈ ಸಂದರ್ಶನವನ್ನು ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಪರಮಾತ್ಮನು ತಮಗೆ ದೀರ್ಘ ಆಯುಸ್ಸು, ಆರೋಗ್ಯವನ್ನು ಕೊಟ್ಟು ಸಂಗೀತ ಪ್ರಪಂಚಕ್ಕೆ ತಮ್ಮಿಂದ ಇನ್ನೂ ಹೆಚ್ಚು ಸೇವೆ ಸಲ್ಲಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ನೇಸರು ತಮಗೆ ಕೃತಜ್ಞತೆಯನ್ನರ್ಪಿಸುತ್ತದೆ)

ಸಂದರ್ಶನ ನೀಡಿದ ದಿನವೇ ಸಂಜೆ 7 ಗಂಟೆಗೆ ಮೈಸೂರು ಅಸೋಸಿಯೇಶನ್ ಸಭಾಂಗಣದಲ್ಲಿ ವಿದ್ವಾನ್ ಆರ್.ಕೆ. ಶ್ರೀಕಂಠನ್‌ರವರ ಸಂಗೀತ ಕಚೇರಿಯನ್ನು ಏರ್ಪಡಿಸಲಾಗಿತ್ತು.

ಶ್ರೀ ಕಂಠನ್‌ರವರು ತಮ್ಮ ಸಂಗೀತ ಕಚೇರಿಯನ್ನು ಕೇದಾರ ಗೌಳರಾಗದಿಂದ ಆರಂಭಿಸಿದರು. ಮೈಸೂರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರ 'ಚಿಂತಯಂ ಸದಾ' (ಸಿಂಧೂರವಾಮ ಕ್ರಿಯೆ) ಗಣಪತಿ ಕೀರ್ತನೆಯನ್ನು ಹಾಡಿದರು. ಶ್ಯಾಮಶಾಸ್ತ್ರಿಗಳ 'ಓ ಜಗದಂಬಾ' (ಆನಂದ ಭೈರವಿ)ಯನ್ನು ಆಲಾಪನೆ, ಸ್ವರ ಪರಸ್ತಾರದೊಂದಿಗೆ ಸಾದರ ಪಡಿಸಿದರು. ತ್ಯಾಗರಾಜರ ''ನಿನ್ನುವಿನಾ'' (ನವರಸ ಕನ್ನಡ) ಚೆನ್ನಾಗಿ ಮೂಡಿ ಬಂತು. ಕಾರ್ಯಕ್ರಮಕ್ಕೆ ಮುಖ್ಯವಾಗಿ ಆಯ್ದುಕೊಂಡಿದ್ದ ಶುದ್ಧ ಸಾವೇರಿ ರಾಗದ ಆಲಾಪನೆ, ಸ್ವಾತಿ ತಿರುನಾಳರ ಕೃತಿ ''ಜನನಿಪಾಹಿ''ಕೃತಿಗೆ ಅಳವಡಿಸಿದ್ದ ನೆರವಲ್, ಕಲ್ಪನಾ ಸ್ವರ, ಮೊಹರ್‌ಗಳು, ಶ್ರೀಕಂಠನ್‌ರವರ ಅಪಾರ ಪಾಂಡಿತ್ಯ ಮತ್ತು ಅನುಭವಕ್ಕೆ

## ಮಹಾರಾಷ್ಟ್ರದ ನೂತನ ರಾಜ್ಯಪಾಲ ಎಸ್.ಎಂ. ಕೃಷ್ಣರಿಗೆ ಅಭಿನಂದನೆಗಳು



ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಎಸ್. ಎಂ. ಕೃಷ್ಣ ಮಹಾರಾಷ್ಟ್ರದ ನೂತನ ರಾಜ್ಯಪಾಲರಾಗಿ ಅಧಿಕಾರ ವಹಿಸಿರುತ್ತಾರೆ. ಮೈಸೂರು ಅಸೋಸಿಯೇಷನ್ ಪರವಾಗಿ 'ನೇಸರು' ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಸಾಕ್ಷಿಯಾಗಿದ್ದುವು. ಮುತ್ತಯ್ಯ ಭಾಗವತರ ''ಈಶ್ವರಿ ರಾಜೇಶ್ವರಿ'' (ಅಭೇರಿ) ದೀಕ್ಷಿತರ ''ಅಖಿಲಾಂಡೇಶ್ವರಿ'' (ದ್ವಿಜಾವಂತಿ) ಕೃತಿಗಳು ರಂಜನೀಯವಾಗಿತ್ತು. ಶ್ರೀಪುರಂದರದಾಸರ ಮಂದಗಮನೆ (ಕಮಾಜ್) ಸ್ಮರಣೆ ಒಂದೇ ಸಾಲದೆ (ಮೋಹನ್), ವರದ ವಿಠಲದಾಸರ ''ಹಣ್ಣು ಬಂದಿದೆ'' (ಹಿಂದೋಳ) ಕೃತಿಗಳು ಭಾವಪೂರ್ಣವಾಗಿ ಮೂಡಿಬಂದು ಎಲ್ಲಾ ವರ್ಗದ ರಸಿಕರನ್ನು ರಂಜಿಸಿತು. ''ಸ್ಮರಿಸುವ ಜನಕೆಲ್ಲಾ'' (ಸುರುಟಿ) ಕೃತಿಯನ್ನು ಹಾಡಿ ಮಂಗಳದೊಂದಿಗೆ ಕಾರ್ಯಕ್ರಮ ಮುಕ್ತಾಯ ಮಾಡಿದರು.

84 ವರ್ಷ ವಯಸ್ಸಾದರೂ, ಶ್ರೀ ಆರ್. ಕೆ. ಶ್ರೀ ಕಂಠನ್‌ರವರು ನಿರಾಯಾಸವಾಗಿ, ಸುಲಲಿತವಾಗಿ, ಸಾದರಪಡಿಸಿದ ಸಂಗೀತವು 48 ವರ್ಷಪ್ರಾಯದವರ ಹರುಪಿನಂತಿದ್ದು ರಸಿಕರಿಂದ ಅಪಾರ ಮೆಚ್ಚುಗೆ ಪಡೆಯಿತು.

ಪುತ್ರ - ಶಿಷ್ಯ ವಿದ್ವಾನ್ ಆರ್.ಕೆ. ರಮಾಕಾಂತ್ ರವರ ಹಿನ್ನೆಲೆಗಾಯನವು ಹಿತಮಿತ ವಾಗಿದ್ದು ಕಾರ್ಯಕ್ರಮಕ್ಕೆ ಶೋಭೆ ತಂದಿತು. ಪಕ್ಕವಾದ್ಯದಲ್ಲಿ ಶ್ರೀಮತಿ ಶಾರದ ಮುರಳಿ (ಪಿಟೀಲು) ಶ್ರೀಧರ್ ಪಾರ್ಥಸಾರಥಿ (ಮೃದಂಗ) ರವರು ಹಿರಿಯ ವಿದ್ವಾಂಸರಿಗೆ ಗೌರವ ಭಕ್ತಿಯನ್ನು ತೋರಿಸುತ್ತಿರುವರೋ ಎಂಬಂತೆ ನುಡಿಸಿ ಕಾರ್ಯಕ್ರಮ ಕಳೆಗಟ್ಟುವಂತೆ ಮಾಡಿದರು.

ಆರಂಭದಲ್ಲಿ ಶ್ರೀಮತಿ ಲಕ್ಷ್ಮೀ ಸೀತಾರಾಂ ಎಲ್ಲರನ್ನು ಸ್ವಾಗತಿಸಿ, ಕಲಾವಿದರನ್ನು ಪರಿಚಯಿಸಿದರು. ಕೊನೆಯಲ್ಲಿ ನಾಗಭೂಷಣ್ ವಂದಿಸಿದರು.

- ಬಿ. ನಾಗಭೂಷಣ್



# ಪು.ತಿ.ನ. ಅವರ ಲಲಿತ ಪ್ರಬಂಧಗಳು

ಕನ್ನಡದ ಬಹುಮುಖ್ಯ ಕವಿಗಳಲ್ಲಿ ಪುತಿನ ಅವರೂ ಒಬ್ಬರು. ಇಂದು ಅವರು ನಮ್ಮ ನಡುವೆ ಇರುತ್ತಿದ್ದರೆ ಅವರಿಗೆ ನೂರು ವರ್ಷ ತುಂಬುತ್ತಿತ್ತು. - ಪು.ತಿ.ನ. ಶತಮಾನೋತ್ಸವದ ನೆನಪಿಗೆ ಈ ಲೇಖನ

ಆಧುನಿಕ ಕನ್ನಡ ವಾಙ್ಮಯದ ಪ್ರಮುಖ ಸಾಹಿತಿಗಳಲ್ಲಿ ಪು.ತಿ.ನ. ಅವರದು ದೊಡ್ಡ ಹೆಸರು. ಕವಿಯಾಗಿ, ನಾಟಕಕಾರರಾಗಿ, ಪ್ರಬಂಧಕಾರರಾಗಿ, ಮೀಮಾಂಸಕರಾಗಿ, ಅನುವಾದಕರಾಗಿ ಕನ್ನಡ ನಾಡುನುಡಿ ಸಾಹಿತ್ಯ ಸಂಸ್ಕೃತಿಯ ಬಣ್ಣ ಬನಿಯನ್ನು ಗಾಢಗೊಳಿಸಿದ ಅವರದು ಬಹುಮುಖ ಪ್ರತಿಭೆ. ಪು.ತಿ.ನ. ಅವರ ಸಾಹಿತ್ಯ ಸಾಧನೆಯನ್ನು ನೋಡಿದಾಗ ಅವರನ್ನು 'ದೈತ್ಯ ಪ್ರತಿಭೆ' ಎಂದು ಕರೆದರೆ ಅದು ಉತ್ಪ್ರೇಕ್ಷೆಯಾಗದು. ಕುವೆಂಪು, ಬೇಂದ್ರೆ, ಪು.ತಿ.ನ. ಕನ್ನಡ ನವೋದಯ ಕಾವ್ಯದ ರತ್ನತ್ರಯರು. ಪು.ತಿನ. ಅವರ ಪೂರ್ಣ ಹೆಸರು ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಾಚಾರ್. ಆದರೂ ಅವರು ಕನ್ನಡ ರಸಿಕರಿಗೆ ಪರಿಚಿತರಾಗಿರುವುದು ಪು.ತಿ.ನ ಎಂಬ ಮೂರಕ್ಷರದಿಂದಲೇ.

ಪು.ತಿನ. ಅವರು 1905 ಮಾರ್ಚ್ ಹದಿನೇಳರಂದು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಪು.ತಿ.ನ. ಅವರು 1998ರಲ್ಲಿ ನಿಧನರಾದರು. ಅವರು ಇಂದು ನಮ್ಮ ನಡುವೆ ಇದ್ದಿದ್ದರೆ ಅವರಿಗೆ ನೂರುವರ್ಷ ತುಂಬುತ್ತಿತ್ತು. ಹೀಗಾಗಿ ಈ ವರ್ಷ ಪು.ತಿನ. ಜನ್ಮ ಶತಮಾನೋತ್ಸವ ವರ್ಷ ನಾಡಿನೆಲ್ಲೆಡೆ ಅವರ ಸಾಹಿತ್ಯದ ವಿವಿಧ ಮುಖಗಳ ಕುರಿತು ಚಿಂತನ ಮಂಥನ ನಡೆಯುತ್ತಿದೆ. ಪು.ತಿ.ನ. ಅವರದು ನಾನಾ ಬಗೆಯ ವ್ಯಕ್ತಿತ್ವ. ಕನ್ನಡದ ಉತ್ತಮ ಕವಿಗಳಲ್ಲಿ ಅವರೂ ಒಬ್ಬರು. ಕಾವ್ಯ ಅವರ ಪ್ರಧಾನ ಅಭಿವ್ಯಕ್ತಿ ಮಾಧ್ಯಮ ಆದರೆ ಪು.ತಿ.ನ. ಕಾವ್ಯ ವಿಹಾರದಿಂದಲೇ ಸಮ್ಮಾನಾದವರಲ್ಲ. ಅವರು ಒಳ್ಳೆಯ ನಾಟಕಕಾರರು. ಅವರು ಬರೆದ ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ಸತ್ಯಾಯನ ಹರಿಶ್ಚಂದ್ರ ಮೊದಲಾದವು ಬಹಳ ಜನಪ್ರಿಯ ನಾಟಕಗಳಾಗಿವೆ.

ಹೊಸಗನ್ನಡದ ಮುಂಗೋಳಿ ಎಂಬ ಖ್ಯಾತಿಗೆ ಭಾಜನನಾದ ಮುದ್ದಣ ''ಪದ್ಯಂ ವದ್ಯಂ ಗದ್ಯ ಹೃದ್ಯಂ'' ಎಂದಿದ್ದಾರೆ. ಆದರೆ ಪು.ತಿನ ಅವರಿಗೆ ಪದ್ಯ ಹಾಗೂ ಗದ್ಯಗಳೆರಡೂ ಅಷ್ಟೇ ಪ್ರಿಯ. ಪು.ತಿ.ನ. ಅವರು ಕನ್ನಡದ ಅತ್ಯುತ್ತಮ ಪ್ರಬಂಧಕಾರರಲ್ಲಿ ಬ್ಬರು.

ಪು.ತಿ.ನ. ಅವರ ಸಾಹಿತ್ಯ ಸಾಧನೆಯನ್ನು ಅವಲೋಕಿಸುವವರಿಗೆ ಒಂದು ಅಚ್ಚರಿಯ ಪ್ರಸಂಗ ಎದುರಾಗುತ್ತದೆ. ಸಾಮಾನ್ಯವಾಗಿ ನಮ್ಮ ಬಹುತೇಕ ಕವಿಗಳು ಕಾವ್ಯದಿಂದ, ಪದ್ಯದಿಂದ ಸಾಹಿತ್ಯ ಕೃಷಿ ಆರಂಭ ಮಾಡಿದರೆ ಪು.ತಿನ. ಪ್ರಬಂಧಕಾರರಾಗಿ ಕನ್ನಡ ವಾಙ್ಮಯವನ್ನು ಪ್ರವೇಶಿಸಿದರು. 1931ರಲ್ಲಿ ಅವರ ಲಲಿತ ಪ್ರಬಂಧಗಳ ಸಂಕಲನ ರಾಮಾಚಾರಿಯ ನೆನಪು ಚೊಚ್ಚಲ ಕೃತಿ ಹೊರಬಂದಿತು. ಇದಾದ ಎರಡು ವರ್ಷಗಳ ಅನಂತರ ಅವರ ಮೊದಲ ಕವನ ಸಂಕಲನ ಹಣತೆ ಬೆಳಕು ಕಂಡಿತು (1933)

ಕನ್ನಡ ಪ್ರಬಂಧ ಸಾಹಿತ್ಯ ಪ್ರಕಾರದಲ್ಲಿ ಪು.ತಿ.ನ. ಅವರಿಗೆ ವಿಶೇಷವಾದ ಸ್ಥಾನಮಾನವಿದೆ. ರಾಮಾಚಾರಿಯ ನೆನಪು, ರಥಸಪ್ತಮಿ ಹಾಗೂ ಇತರ ಚಿತ್ರಗಳು, ಈಚಲು ಮರದ ಕೆಳಗೆ, ಧೇನುಕ ಪುರಾಣ ಎಂಬ ನಾಲ್ಕು ಪ್ರಬಂಧ ಸಂಕಲನಗಳನ್ನು ಅವರು ಹೊರತಂದಿದ್ದಾರೆ. ಉತ್ತಮ ಕವಿಯಾಗಿ ಹೆಸರು ಮಾಡಿದ ಪು.ತಿನ. ಅವರು ತಮ್ಮ ಲಲಿತ ಪ್ರಬಂಧಗಳ ಮೂಲಕ ಒಳ್ಳೆಯ ಗದ್ಯ ಲೇಖಕರೂ ಆದರು. ಅವರು ಬರೆದ ಬೆರಳೆಣಿಕೆಯ (ನಾಲ್ಕು) ಪ್ರಬಂಧ ಸಂಕಲನಗಳು ಹಲವಾರು ಬಾರಿ ಮರುಮುದ್ರಣ ಕಂಡಿರುವುದು ಅವುಗಳ ಜನಪ್ರಿಯತೆಗೆ ಸಾಕ್ಷಿ. ಪು.ತಿ.ನ. ಅವರು ಕನ್ನಡ ಪ್ರಬಂಧಗಳಿಗೆ ಹೊಸತನ ತಂದು ಕೊಟ್ಟರು. ಅವರ ವೈಚಾರಿಕ ಹೃದ್ಯ ಪ್ರಬಂಧಗಳಿಂದ ಕನ್ನಡ ಪ್ರಬಂಧ ಸಾಹಿತ್ಯಕ್ಕೆ ವಿಶೇಷ ಕಳೆ ಬಂದಂತಾಯಿತು. ಈಚಲು ಮರದ ಕೆಳಗೆ ಹಾಗೂ ಧೇನುಕ ಪುರಾಣ ಕನ್ನಡದ ಅಪೂರ್ವ ಪ್ರಬಂಧ ಸಂಕಲನಗಳ ಸಾಲಿಗೆ ಸೇರಿಹೋಗಿವೆ. ಒಳ್ಳೆಯ ಪ್ರಬಂಧ ಸಂಕಲನ ಹೇಗಿರಬೇಕು ಎಂಬುದಕ್ಕೂ ಈ ಕೃತಿಗಳು ಮಾದರಿಯಾಗಿವೆ.

ಈಚಲು ಮರದ ಕೆಳಗೆ ಒಂದು ಸೊಗಸಾದ ಪ್ರಬಂಧ ಸಂಕಲನ ಹಾಸ್ಯ, ವಿಡಂಬನೆ, ಸಾಮಾಜಿಕ ದರ್ಶನ, ಸಮಾಜ ವಿಮರ್ಶೆ ಈ ಕೃತಿಯ ವೈಶಿಷ್ಟ್ಯ. ''ಈ ಕೃತಿಯ ಆರಂಭದಲ್ಲೇ ಲೇಖಕರು ಈ ಬರವಣಿಗೆಯ ಉದ್ದೇಶವನ್ನು ಹೇಳಿಕೊಂಡಿದ್ದಾರೆ. ''ಲೋಕದ ಡೊಂಕನ್ನು ತಿದ್ದಬೇಕೆಂಬ ಚಟ, ಹೊಸ ದೃಷ್ಟಿಯನ್ನು ಮೂಡಿಸಬೇಕೆಂಬ ಹಾಗೂ ಹೊಸ ತತ್ವಗಳನ್ನು ಹರಡಬೇಕೆಂಬ ಹಟ ಎಂದಿದ್ದಾರೆ.

ಈಚಲು ಮರದ ಕೆಳಗೆ ಎಂಬ ಪ್ರಬಂಧ, ಒಳ್ಳೆಯ ಕವಿಯೊಬ್ಬನ ಗದ್ಯವೂ ಚೆನ್ನಾಗಿರುತ್ತದೆ ಎಂಬುದನ್ನು ಎತ್ತಿತೋರಿಸುತ್ತದೆ. ಈಚಲು ಮರವನ್ನು ಜನ ಗೌರವಿಸುವುದು ಅಷ್ಟರಲ್ಲೇ ಇದೆ. ನಮ್ಮ ಜನ

ಕನ್ನಡದ ಹಿರಿಯ ಸಾಹಿತಿ ಮಾಸ್ತಿ ವೆಂಕಟೇಶ ಐಯ್ಯಂಗಾರ್ ಅವರ ಕವಿತೆಯ ಒಂದು ಸಾಲು ಇಂತಿದೆ.

ಸೊಗಸಬೇಕೇ? ಬಾಳು, ಕಸವನೆಸೆ
ರಸವ ಬೆಳೆ, ನಿಜವ ತಿಳಿ ಅದ ಸಾರು

ಈ ಮಾತು ಪು.ತಿ.ನ. ಅವರ ವ್ಯಕ್ತಿತ್ವಕ್ಕೆ ಚೆನ್ನಾಗಿ ಅನ್ವಯಿಸುತ್ತದೆ. ಕನ್ನಡಿಗರಿಗೆ ಪು.ತಿ.ನ. ಅವರು ಪರಿಚಿತರು. ಬಾಲ್ಯದಲ್ಲಿ ಓದಿದ ಒಂದು ಪದ್ಯ ನೆನಪಾಗುತ್ತಿದೆ.

''ಹರಿಗೆ ಎಂದು ಗುಡಿಯನೊಂದು ಕಟ್ಟುತ್ತಿರುವೆನು
ದೀನಗಿಂತ ದೇವ ಬಡವ ಎಂದು ಬಗೆವನು''.

ಬದುಕು ಹಸನಾಗಬೇಕು. ನಾವು ಪರಿಪೂರ್ಣರಾಗಬೇಕು. ಪರಿಪೂರ್ಣನಾದ ಮನುಷ್ಯ ದೈವತ್ವಕ್ಕೇರುತ್ತಾನೆ ಎಂಬ ನಂಬಿಕೆ ಪು.ತಿ.ನ. ಅವರಿಗಿತ್ತು.

ಪು.ತಿ.ಅ. ಅವರ ಕಾವ್ಯದ ಉದ್ದೇಶವೇ ಭಿನ್ನ ಬಗೆಯದು

ಲಘುವಾಗಲೆ ಮನ, ಗೆಲುವಾಗಲೆ ಮನ
ಹಾರು ನನ್ನ ಬಿಟ್ಟು
ಹಾರಿ ಹರಿಯ ಮುಟ್ಟು

ಇದೇ ಮಾದರಿಯ ಒಂದು ಕವಿತೆ ಕುವೆಂಪುರವರು ಬರೆದಿದ್ದಾರೆ. ''ಹಾರೈಸು ಹಾರೈಸು ಹಾರೈಸು ಜೀವ ಹಾರೈಸು, ನೀನಾಗುವನ್ನೆ ಗುಂ ದೇವ''

ಹೀಗೆ ಪು.ತಿ.ನ. ಅವರ ಸಾಹಿತ್ಯದಲ್ಲಿ ಒಂದು ರೀತಿ ದಾರ್ಶನಿಕ ಅನುಭೂತಿ ಎದ್ದು ಕಾಣುತ್ತದೆ.

ಕಲ್ಪವೃಕ್ಷಕ್ಕೆ ಮಹತ್ವ ನೀಡಿದರು. ಸಮಾಜದಲ್ಲಿ ಈಚಲು ಮರ ಸಾಕಷ್ಟು ತಿರಸ್ಕಾರಕ್ಕೆ ಒಳಗಾಗಿದೆ. ಇಂಥ ಒಂದು ಮರವನ್ನು ದೊಡ್ಡ ತತ್ವಜ್ಞಾನಿಯ ಮಟ್ಟಕ್ಕೇರಿಸಿ ಗೌರವಿಸುತ್ತಾರೆ. ಅಷ್ಟೇ ಅಲ್ಲ ಕೌಶಿಕ ಕಲ್ಪದ್ರುಮ ಎಂದು ಕರೆದು, ದೇವಭಾಷೆಯನ್ನು ಬಲ್ಲ ಅದನ್ನು ರಾಮಾನಂಥ ಬ್ರಾಹ್ಮಣ ಮರವೇ ಆಗಿರಬೇಕು! ಎನ್ನುತ್ತಾ ಅದರ ಅಸಾಧಾರಣ ಗುಣವನ್ನು ಮನಮುಟ್ಟುವಂತೆ ಬಣ್ಣಿಸಿದ್ದಾರೆ.

''ನನಗೆ ತೆಂಗಿನ ಮರವನ್ನು ಕಂಡರೆ ಮನಸ್ಸಿಗೆ ಹೇಗೆ ಹೇಗೆಯೋ ಆಗುತ್ತದೆ. ನಮ್ಮ ತೋಟ ಜ್ಞಾಪಕಕ್ಕೆ ಬರುತ್ತದೆ. ರೈತ ಜ್ಞಾಪಕಕ್ಕೆ ಬರುತ್ತಾನೆ. ಆ ತೋಟದ ಕಾಯನ್ನು ನಾನು ತಿನ್ನುವಂತಿಲ್ಲ. ಆ ಎಳನೀರನ್ನೂ ಕುಡಿಯುಂತಿಲ್ಲ. ಕೊಬ್ಬರಿಯ ಸುದ್ದಿಯೇ ಕಾಣೆ. ಅಲ್ಲಿ ಅವನು ಅನುಭವಿಸಬೇಕು. ಇಲ್ಲಿ ನಾನು ಈ ಪದಾರ್ಥಗಳನ್ನು ಒಂದಕ್ಕೆ ಹತ್ತರಷ್ಟು ಕೊಟ್ಟು ಕೊಂಡುಕೊಳ್ಳಬೇಕು..... ಈಚಲು ಮರವನ್ನು ಕಂಡರೆ

ನನಗೆ ಏನೋ ಒಂದು ಅಭಿಮಾನ. ಇದರ ಧೈರ್ಯವೇ ಧೈರ್ಯ. ಇದು ಇಲ್ಲದ ಜಾಗವಿಲ್ಲ ಮೈದಾನದಲ್ಲಿ ಎಲ್ಲಿ ಸ್ವಲ್ಪ ನೀರಿನ ಆಸರೆ ಇದ್ದರೆ ಇದು ಹಾಜರು. ತಾನೆ ಕಾಡಾಗಿ ಬೆಳೆದರೂ ಸರಿಯೇ. ಒಂಟಿಯಾಗಿ ಬೆಳೆದರೂ ಸರಿಯೇ ಇದು ನಿರ್ಭಯವಾಗಿ ಯಾರ ಹಂಗೂ ನನಗೆ ಬೇಡ. ನನ್ನನ್ನು ತಡೆಯುವವನಾವನು ಎಂದುಕೊಂಡು ಗುಂಗುರು ತಲೆಯ ಗರಿಯನ್ನಲ್ಲಾಡಿಸುತ್ತಾ ನಿಂತಿರುತ್ತದೆ. ತರುಗಳಲ್ಲಿ ಇದು ಮ್ಲೇಚ್ಛ. ಕಲ್ಪದ್ರುಮಗಳಲ್ಲಿ ಕೌಶಿಕ ಕಲ್ಪದ್ರುಮ ಹೊಲದ ಮಧ್ಯದಲ್ಲೋ ಗಿಡದ ಮಧ್ಯದಲ್ಲೋ ತೊರೆಯ ತಡಿಯಲ್ಲೋ ಗುಡಿಯ ಹಾಳು ತೋಟದಲ್ಲೋ ಹಾಳು ಮಂಟಪದ ಬದಿಯಲ್ಲೋ ಅಂತೂ ಎಲ್ಲಾದರೂ ಸರಿಯೇ ಇದು ನಿಲ್ಲುವ ನಿಲುವೇ ನಿಲುವು. ಜನಕ್ಕೇನೊ ಇದನ್ನು ಕಂಡರೆ ಅಸಹ್ಯ, ಇದರ ಸೋಕು ಮೈಲಿಗೆ'' ಎನ್ನುತ್ತಾ ಈಚಲು ಮರದ ಮೂಲಕ ಹೊಸದರ್ಶನವನ್ನು ಮಾಡುಸುತ್ತಾರೆ ಪು.ತಿ.ನ. ಪು.ತಿ.ನ. ಅವರು ಶುದ್ಧ ಸಂಪ್ರದಾಯಸ್ಥ ಕುಟುಂಬದಿಂದ ಬಂದವರು ಆದರೂ ಅವರು ಸಮಾಜದಲ್ಲಿನ ಲೋಪದೋಷಗಳನ್ನೂ ಅರ್ಥವಿಲ್ಲದ ಆಚರಣೆಗಳನ್ನು ಎತ್ತಿ ತೋರಿಸಿ ವ್ಯಂಗ್ಯವಾಡಿದ್ದಾರೆ. ಈಚಲು ಮರವೇನು ಕಮ್ಮಿ? ಕವಿಯ . ಕೆಲಸಕ್ಕೂ ಈಚಲು ಮರದ ಕೆಲಸಕ್ಕೂ ಯಾವುದೇ ಅಂತರವಿಲ್ಲ. ''ನನ್ನ ರಸ ಸಂಸರ್ಗದಿಂದ ಎಲ್ಲರ ಚೈತನ್ಯಕ್ಕೂ ಜಾಗ್ರದವಸ್ಥೆಯಲ್ಲಿಯೇ ಸ್ವಪ್ನಾವಸ್ಥೆ ನಿಸ್ಸಂಶಯವಾಗಿ ಪ್ರಾಪ್ತವಾಗುತ್ತದೆ. ಅದು ನಿದ್ರಾಂತವೂ ಆಗುತ್ತದೆ. ನಿನ್ನ ಕಸಬೂ ನನ್ನ ಕಸಬೂ ಒಂದೇ'' ಕವಿ ಕಾಣುವ ದರ್ಶನಕ್ಕೇನೂ ಕೊರತೆಯಿಲ್ಲ ಈಚಲು ಮರ ಕಾಣುವ ದರ್ಶನದಲ್ಲಿ. ಮನುಷ್ಯನ ಪ್ರವೃತ್ತಿಯನ್ನು ಈಚಲು ಮರದ ಮೂಲಕ ಲೇಖಕರು ವ್ಯಂಗ್ಯವಾಡಿದ್ದಾರೆ. ''ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾ'' ಎಂದಿದ್ದಾರೆ.

ಈಚಲುಮರ ಹೇಳುವ ಈ ಕೆಳಗಿನ ಮಾತುಗಳು ಅದೆಷ್ಟು ಮಾರ್ಮಿಕವಾಗಿದೆ ನೋಡಿ.

''ನೀನರಿತುರುವಷ್ಟು ನಿಕೃಷ್ಟನಲ್ಲ ನಾನು. ನನಗೂ ನಿನಗೂ ಎಷ್ಟೋ ಬಗೆಯಲ್ಲಿ ಸಾಮರಸ್ಯವಿದೆ. ನಿನ್ನಂತೆ ನನಗೂ ಬಯಲು ಕಾಡೇ ಇಷ್ಟ. ನಿನ್ನಂತೆ ನಾನೂ ಸ್ವಲ್ಪ ಪ್ರಚೋದಕ. ಸತ್ಯ ಪ್ರಿಯ. ಆದರೆ ನಿನ್ನ ಮಡಿಭಾವ ನನಗಿಲ್ಲ. ನಾನು ನಿನ್ನಷ್ಟು ಅಸಹಾಯಕನೂ ಅಲ್ಲ. ನನಗಿಷ್ಟ ಬಂದಕಡೆ ನಾನು ಹೋಗುತ್ತೇನೆ, ನೆಲೆಸುತ್ತೇನೆ. ಸಿಕ್ಕಿದ ಜಾಗದಲ್ಲಿ ಬೆಳೆಯುತ್ತೇನೆ. ನಾನು ಯೋಗಿಯಂತೆ ಸ್ವತಂತ್ರ '' ಪ್ರಬಂಧಕಾರರೇ ಇಲ್ಲಿ ವಿವಿಧ ಪಾತ್ರಗಳಲ್ಲಿ ನಿಂತು ಮಾತನಾಡುವ ಪರಿ ಬಲು ಚೆನ್ನ.

ಭೀತಿ ಮೀಮಾಂಸೆ ಎಂಬ ಪ್ರಬಂಧದಲ್ಲಿ ''ದಯವೇ ಧರ್ಮದ ಮೂಲ'' ಎಂಬ ಮಾತನ್ನು ''ಭಯವೇ ಧರ್ಮದ ಮೂಲ'' ಎಂಬುದಾಗಿ ತಿಳಿಸಿ ಅದಕ್ಕೆ ಯುಕ್ತವಾದ ಕಾರಣಗಳನ್ನು ನೀಡಿದ್ದಾರೆ. ''ನೆರಳು - ನಡುನೆರಳು 'ಪಡಿನೆರಳು' ಎಂಬ ಲೇಖನದಲ್ಲಿ ಪು.ತಿ.ನ. ಅವರ ವೈಚಾರಿಕ ಚಿಂತನೆ ಹರಳು ಗಟ್ಟಿದೆ. ವಿಷಯ ಮಂಡನೆಯಲ್ಲಿ ಅವರ ಕವಿ ಪ್ರತಿಭೆ ಇಲ್ಲಿ ಮಿಂಚಿರುವುದನ್ನು ಕಾಣಬಹುದು. ಕವಿಯ ಮೂಲಕ ಒಂದು ದಿನವೂ ಇದೇ ಮಾದರಿಯ ಪ್ರಬಂಧ. ಕವಿಯ ಸಾಮಾನ್ಯ ದಿನಚರಿಯನ್ನು ಅಸಮಾನ್ಯವಾಗಿ ಕಲಾತ್ಮಕವಾಗಿ ಚಿತ್ರಿಸುತ್ತಾರೆ ಕವಿ.

''ಗುಡುಗಿನ ನಗಾರಿಯನ್ನು ದೇವತೆಗಳು ಬಾರಿಸುವಾಗ, ಮಳೆಯ ಹನಿ ಸೂರಿನ ಮೇಲೆ ಬೀಳುವಾಗ, ತೋಪಿನಲ್ಲಿ ಮರಗಳ ಮಹಾವೀಣೆಯನ್ನು ಗಾಳಿ ಬಾರಿಸುವಾಗ, ತೊರೆ ಮೊರೆಯುವಾಗ, ಕರುಗಳು ತಮ್ಮ ತಾಯಿಯ ಮೊಲೆಗಳನ್ನು ಮುಸುಡಿನಿಂದ ಗುದ್ದಿ ಗುದ್ದಿ ತೊರೆ ಬಿಡಿಸುವಂತೆ ಉತ್ಸವಕಾಲದಲ್ಲಿ ದಿವ್ಯವಾದ ನಾಗಸ್ವರದ ಮೇಳಗಳು ಆಕಾಶಕ್ಕೆ ಸುಸ್ವನಗಳನ್ನೆಸೆಯುತ್ತಾ ಆನಂದದ ಸೊರೆಯನ್ನು ಬಿಡಿಸುತ್ತಿರುವಾಗ ನನ್ನ ಕಿವಿಗೆ ನಿಜವಾಗಿ ಹಬ್ಬ'' ಎಂದಿದ್ದಾರೆ.

ಪು.ತಿ.ನ. ಅವರು ತಮ್ಮ ಪ್ರಬಂಧಗಳಲ್ಲಿ ಸೂಕ್ಷ್ಮಾತಿ ಸೂಕ್ಷ್ಮ ವಿಚಾರಗಳನ್ನು ದಾರ್ಶಕ ನೆಲೆಯಲ್ಲಿ ನಿಂತು ಚಿಂತಿಸಬಲ್ಲರು. ಅವರು ಪ್ರಬಂಧಗಳಲ್ಲಿ ಬಳಸುವ ಮಾತು ಅನುಭವ ಜನ್ಯವಾಗಿರುವುದರಿಂದ ಸೂಕ್ತಿಗಳಂತಿವೆ. ಕಲಾವಿಲಾಸಿಗಳಿಗೆ ಬಿಂಬಗಳಿಗಿಂತಲೂ ಪ್ರತಿಬಿಂಬಗಳಲ್ಲಿಯೇ ಆಸಕ್ತಿ, 'ಲೋಭಿಗಳೆಂದರೆ ನಿಜವಾದ ಧನಯೋಗಿಗಳು' 'ನಿದ್ದೆಯ ಕೋಟೆಯ ಮೇಲೆ ನಿಂತು ಧ್ವಜಪತಾಕೆಯನ್ನು ಹಾರಿಸುವ ರೀತಿ ಹುಂಜದ್ದು'

'ಸರಸವಾದ ಮಾತುಗಳಿಂದ ಕಿವಿಗೆ ಜಲಕ್ರೀಡೆ' 'ಬಿಸಿಲಿನ ವಿಷವನ್ನೂ ಕುಡಿದೇ ಚಂದ್ರನ ಕರುಳು ಕಪ್ಪಾಯಿತೇ', ಒಂದೊಂದು ಊರಿಗೆ ಒಂದೊಂದು ಜೀವಾತ್ಮವಿದೆ, 'ಹೆಂಗಸರನ್ನು ಹದ್ದಿನಲ್ಲಿಡುವವರು ಹೆಂಗಸರೇ ಹೊರತು ಗಂಡಸರಲ್ಲ' 'ದೇಶ ಈಗ ನಮ್ಮ ಹತೋಟಿಯಲ್ಲಿದೆ. ಆದರೆ ಕಾಲ ಇಲ್ಲ' ಪು.ತಿ.ನ. ಅವರ ಪ್ರಬಂಧಗಳಲ್ಲಿ ಎದ್ದು ಕಾಣುವುದು. ಅವರ ಲೋಕದೃಷ್ಟಿ. ಈ ಬದುಕಿನ ಬಗ್ಗೆ ವಿಶೇಷ ಅಭಿಮಾನ. ಲೋಕದಲ್ಲಿ ಯಾವ ವಸ್ತುವನ್ನು ಹಿಡಿದೆಳೆದರೂ ಅದರ ಹಿಂದೆ ಬ್ರಹ್ಮಾಂಡವೇ ಬರುತ್ತದೆ ಎಂದಿದ್ದಾರೆ ಪು.ತಿ.ನ. ಹೀಗಾಗಿ ಅವರ ಪ್ರಬಂಧಗಳಲ್ಲಿ ಹಣಕಾಸಿನ ವಿಚಾರ, ಪ್ರಕೃತಿ, ಸಂಸ್ಕೃತಿ, ಸ್ತ್ರೀ ಪುರುಷ ಸ್ವಭಾವ, ಕವಿಕಾವ್ಯ ವಿಚಾರ, ಸಂಗೀತ, ವಿಜ್ಞಾನ, ಆಧ್ಯಾತ್ಮ, ಹೊಸ ಸಂವೇದನೆಗಳ ವಿಶ್ಲೇಷಣೆ ಹಾಳತವಾಗಿ ಬಂದಿದೆ. ಆಧುನಿಕ ಶಿಕ್ಷಣ ಪಡೆದ ನಮ್ಮ ಕಾಲೇಜು ಹುಡುಗರು ಸಂಸ್ಕೃತಿಯಿಂದ ದೂರವಾಗುವ ಬಗ್ಗೆ ಕವಿಗೆ ತೀವ್ರ ವಿಷಾದವಿದೆ.

'ಧೇನುಕ ಪುರಾಣ' ಪು.ತಿ.ನರಸಿಂಹಾಚಾರ್ ಅವರ ಮತ್ತೊಂದು ಗಮನಾರ್ಹ ಪ್ರಬಂಧ ಸಂಕಲನ. ಇದರಲ್ಲಿ ಇಪ್ಪತ್ತೆರಡು ಪ್ರಬಂಧಗಳಿವೆ. ಇಲ್ಲಿನ ಪ್ರಬಂಧಗಳು ಸಾಕಷ್ಟು ವೈವಿಧ್ಯಮಯವಾಗಿದೆ. ಮಾಗಿದ ಅನುಭವ, ಹಿತಮಿತ ಮಧುರ ಚಿಂತನ ಇಲ್ಲಿ ಸೊಗಸಾಗಿ ಅನಾವರಣಗೊಂಡಿದೆ. ಮಸಾಲೆದೋಸೆ ಮತ್ತು ಧೇನುಕೋಪಾಖ್ಯಾನ ವಿಶಿಷ್ಟ ಬಗೆಯ ಪ್ರಬಂಧಗಳಾಗಿವೆ. ಪ್ರಬಂಧಕಾರರಿಗೆ ಇರುವ ರಸಿಕತೆ, ವರ್ಣನಾಚಾತುರ್ಯ ಮತ್ತು ಶೈಲಿ ಆಪ್ತವೆನಿಸುವಂತಿದೆ. ಮಸಾಲೆ ದೋಸೆಯ ಮಹಾತ್ಮೆಯನ್ನು ಪು.ತಿ.ನ ಅವರಂತೆ ವರ್ಣಿಸಿದ ಕವಿ ಮತ್ತೊಬ್ಬರಿಲ್ಲ. ಆ ವರ್ಣನೆ ಕೇಳಿದರೆ ಯಾರ ಬಾಯಲ್ಲೂ ನೀರು ಬಾರದೇ ಹೋಗದು. ಪ್ರಬಂಧಕಾರರು ಮಸಾಲೆ ದೋಸೆಯನ್ನು ವರ್ಣಿಸುವ ಪರಿ ಇಂತಿದೆ.

''ನಿಜವಾಗಿ ಮಸಾಲೆದೋಸೆ ಕ್ರಾಂತಿಕಾರವಾದ ವಸ್ತುವೇನೋ ಹೌದು. ಅದು ಹಿಟ್ಟಿನ ಮುದ್ದೆಯಂತೆ ಸರಳವಾದ ಊಣಿಸಲ್ಲ. ಅದು ಬಹು ಸಂಕೀರ್ಣವಸ್ತು. ಅನೇಕ ತಿಂಡಿಗಳಿಂದ ಕೂಡಿದ ಶ್ರುತಿಗೆ ಸಿದ್ಧವಾದ ಪಿಟೀಲಿನ ಮೇಲೆ ಕೋಲಲು ವಾದಕನು ಕಮಾನು ಆಡಿಸುವ ಹಾಗಾಗುತ್ತದೆ. ಪ್ರವೀಣನಾದ ವಲಲನು ಹದವನ್ನರಿತು ನಿರ್ಮಿಸಿದ ಮಸಾಲೆ ದೋಸೆಯ ತುಣುಕು ರಸನೆಗೆ ಸೋಕಿದಾಗ, ಕಾಂತೆಯ ಪ್ರಣಯ ಕೋಪದಂತೆ ಅದು ಹೊರಗೆ ಕಟು, ಒಳಗೆ ಮೃದು, ಇಂಗಿನ ಕಂಪು, ಮೆಂತ್ಯದ ಒಗಚು, ಹಸಿಶುಂಠಿ ಹಸಿಮೆಣಸಿನ ಕಾಯಿ, ಮೆಣಸುಗಳ ಖಾರಗಳು, ಪಲ್ಯದ ವಿವಿಧ ಕಾಯಿಗಳ ಮಾಧುರ್ಯ, ಹಿಟ್ಟುಗಳ ಹದುಗಿನ ಹಿತವಾದ ಹುಳಿ, ತುಪ್ಪದ ಕಂಪು, ಬೆಣ್ಣೆಯ ವಿಪುಲಾರ್ದ್ರತೆ ಈ ಸಮೃದ್ಧರಸಗಳನ್ನು ಹೊಂದಿಸಿ ಸುತ್ತಲೂ ಕೆನ್ನಾಲಿಗೆಯನ್ನೂ ಚಾಚಿ ಕಾವಲಿಯ ಮೇಲಿನ ಭಕ್ಷ್ಯವನ್ನು ರುಚಿ ನೋಡಲು ಹವಣಿಸುವ ಅಗ್ನಿ ದೇವನನ್ನು ನೀರಿನಿಂದ ದಟ್ಟಿಸುತ್ತಾ, ಕಣ್ಣಿಗೆ ನಾಲಗೆ ಹರಿತವನ್ನು ಕೊಟ್ಟು ಒಂದು ಕ್ಷಣವೂ ಹಿಂಚು ಮುಂಚಿಲ್ಲದಂತೆ ಸಿದ್ಧಕ್ಷಣದಲ್ಲಿ ಎಲೆಗಿಳಿಸುವ ಕುಶಲ ಬಾಣಸಿಗನ ಕುಶಲ ಕೃತಿ ಈ ಮಸಾಲೆದೋಸೆ ಇದಕ್ಕೆ ಯಾವ ರಸನಾವಂತ ಮರುಳಾಗಲೊಲ್ಲ. ಆ ಮಡ್ಡಿ ಇಡ್ಲಿಯನ್ನು ಇದರ ಮುಂದು ನಿವಾಳಿಸಬೇಕಲ್ಲವೇ?'' ಹೀಗೆ ಮಸಾಲೆ ದೋಸೆಯ ವೈಶಿಷ್ಟ್ಯವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಮಸಾಲೆ ದೋಸೆಯಿಂದ ನಮ್ಮ ಸಮಾಜದಲ್ಲಿ ಏನೆಲ್ಲ ನಡೆಯಿತು

ಎಂಬುದನ್ನು ಚಿತ್ತಾಕರ್ಷಕವಾಗಿ ಬಣ್ಣಿಸಿದ್ದಾರೆ.

ಧೇನುಕೋಪಾಖ್ಯಾನ ಇದೊಂದು ಕ್ಲಾಸಿಕ್ ಎನ್ನಬಹುದಾದ ಪ್ರಬಂಧ. ಇದು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ನಮ್ಮ ಎಮ್ಮೆಗೆ ಮಾತು ತಿಳಿಯುವುದೇ? ಎಂಬ ಪ್ರಬಂಧಕ್ಕೆ ಹತ್ತಿರವಾಗಿದೆ. ಧೇನುಕ ಅರ್ಥಾತ್ ಕತ್ತೆಯ ಕುರಿತು ಬಹಳ ಕಾಳಜಿಯಿಂದ ಇಲ್ಲಿ ಲೇಖಕರು ಚಿಂತಿಸಿದ್ದಾರೆ. ಕತ್ತೆಗಳನ್ನು ಮನುಷ್ಯರು ತೀರಾ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಾರೆ. ಅವುಗಳ ಬಗೆಗೆ ಒಂದು ರೀತಿಯ ತಾತ್ಸಾರದ ಭಾವನೆಯಿದೆ. ಇಲ್ಲಿ ಕತ್ತೆಗಳು ನಡೆಸುವ ಸಂವಾದ ಮನುಷ್ಯನ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತದೆ. ಒಂದು ಕತ್ತೆ ಹೀಗೆ ಹೇಳುತ್ತದೆ. ''ಸದ್ಯ ನೀವು ನನ್ನನ್ನು ತಿಂದು ಹಾಕದೆ ಬಿಟ್ಟಿದ್ದೀರಲ್ಲ, ಅದೊಂದು ದೊಡ್ಡ ಉಪಕಾರ'' ಎಂದರೆ ಮತ್ತೊಂದು ಕತ್ತೆ ''ಅಯ್ಯೋ ಪೆಚ್ಚೇ ನಮ್ಮ ಮಾಂಸ ಒರಟು, ರುಚಿಯಿಲ್ಲ ಕಣೋ, ಅದಕ್ಕೋಸ್ಕರ ಬಿಟ್ಟಿದ್ದಾರೆ. ಈ ಒಂಟೆಯ ಪಾಡನ್ನು ನೋಡು'' ಎಂದರೆ ಮತ್ತೊಂದು ಕತ್ತೆ ''ಅಬ್ಬ ! ಮನುಷ್ಯನ ನಾಲಗೆಗಿಂತ ಕ್ರೂರವಾದದ್ದು ಈ ಸೃಷ್ಟಿಯಲ್ಲೇ ಇಲ್ಲ. ಇದೊಂದರಿಂದ ಎಷ್ಟೊಂದು ಪ್ರಾಣಿವಂಶಗಳು ನಿರ್ನಾಮವಾಗಿ ಹೋಗಿವೆ. ಮಾಂಸವೊಂದೇ ಅಲ್ಲ, ಒಳ್ಳೆದಂತ , ಒಳ್ಳೆ ಕೂದಲು, ಒಳ್ಳೆ ಗರಿ, ಒಳ್ಳೆ ಚರ್ಮ ಯಾವುದನ್ನೂ ಈ ಪ್ರಾಣಿ ಬಿಡುವುದಿಲ್ಲ'' ಎಂಬಲ್ಲಿ ವಿಡಂಬನೆ ಸಾಕಷ್ಟು ತೀಕ್ಷ್ಣವಾಗಿದೆ. ನವುರಾದ ಹಾಸ್ಯದ ಮೂಲಕ ಮನುಷ್ಯ ವರ್ಗ ಹಾಗೂ ಪ್ರಾಣಿ ವರ್ಗದ ಮುಖಾಮುಖಿಯ ಮೂಲಕ ಅಲ್ಲಿನ ಸತ್ಯದರ್ಶನ ಮಾಡಿಕೊಡುತ್ತಾರೆ.

ಪುತಿನ ಅವರು ತಮ್ಮ ಮೊದಲ ಪ್ರಬಂಧ ಸಂಕಲನವನ್ನು 'ಭಾವ ಪ್ರಬಂಧ'ವೆಂದು ಕರೆದಿದ್ದಾರೆ. 'ರಾಮಾಚಾರಿಯ ನೆನಪು' ಕೃತಿಯಲ್ಲಿ ಲೇಖಕರು ತಮ್ಮ ಬಾಲ್ಯದ ಗೆಳೆಯನೊಬ್ಬನ ಸಹವಾಸ ಸಹಚರ್ಯವನ್ನು ಕಲಾತ್ಮಕವಾಗಿ ಬಣ್ಣಿಸಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಸಾವಿಗೆ ತುತ್ತಾದ ರಾಮಾಚಾರಿಯ ವಿವರವನ್ನು ಕೊಡುವಾಗ ಯಾರ ಕಣ್ಣಂಚಿ ಹನಿಯಾಡದೇ ಇರದು. ಒಳ್ಳೆಯವರಿಗೇ ಬೇಗ ಸಾವು ಬರುವುದು ಲೋಕ ರೂಢಿ ಎಂಬ ಮಾತು ಬಹಳ ಮಾರ್ಮಿಕವಾಗಿದೆ.

ರಥ ಸಪ್ತಮಿ ಹಾಗೂ ಇತರ ಚಿತ್ರಗಳು ಕೃತಿಯಲ್ಲಿ ಎಂಟು ಪ್ರಬಂಧಗಳಿದ್ದು ಇವೆಲ್ಲವುಗಳ ಕೇಂದ್ರ ಮೇಲುಕೋಟೆ ಮುಖ್ಯ ವಿಷಯ ಅಲ್ಲಿಯ ದೇವತೆ, ಆಚರಣೆ, ಅಲ್ಲಿನ ಕೋಟೆ, ರಥ ಸಪ್ತಮಿ, ಮಳೆ, ಬೀದಿ ಬಸವ ಮೊದಲಾದ ಪ್ರಬಂಧಗಳು ಬಹಳ ಆತ್ಮೀಯವಾಗಿವೆ. ಈ ಸಂಕಲನದ ಬೀದಿ ''ಒಂದು ದಿನ ಲೇಖಕರಿಗೆ ಹಲಸಿನ ಹಣ್ಣು ತಿನ್ನುವ ಆಸೆಯಾಗಿ ದೊಡ್ಡ ಹಣ್ಣೊಂದನ್ನು ಖರೀದಿಸಿ ಮನೆಯಲ್ಲಿ ಒಬ್ಬರೇ ಕುಳಿತು ಹಣ್ಣನ್ನು ಬಿಡಿಸುತ್ತಿರುವಾಗ ಬೀದಿಯ ಬಸವನೊಂದು ಹಠಾತ್ ಹಣ್ಣಿನ ಪರಿಮಳ ಹಿಡಿದು ಧಾವಿಸಿ ಬರುತ್ತದೆ. ಅದರ ಮುಂದೆ ಕತ್ತರಿಸಿದ ಹಣ್ಣನ್ನು ಹಾಕುತ್ತಾ ಅದೊಂದು ಒಳ್ಳೆಯ ಮನುಷ್ಯನೆಂಬಂತೆ ಭಾವಿಸಿಕೊಂಡು ಅದರ ಜೊತೆ ಸಂವಾದ ನಡೆಸುತ್ತಾರೆ.

ಪು.ತಿ.ನ. ಅವರ ಪ್ರಬಂಧಗಳಲ್ಲಿ ಎದ್ದು ಕಾಣುವುದು ಲವಲವಿಕೆಯ ಭಾವ. 'ಹೊಸ ಚಿಗುರು - ಹಳೇ ಬೇರು' ಎಂಬ ತತ್ವದಲ್ಲಿ ಅವರಿಗೆ ವಿಶೇಷ ನಂಬಿಕೆ. ಅವರ ಪ್ರಬಂಧಗಳನ್ನು ಓದುವುದರಲ್ಲಿಯೇ ಒಂದು ಬಗೆಯ ಸುಖವಿದೆ.

''ಬಿಡುವು ಬಿಡುವು ಬಿಡುವು
ವಿನೋದಕೇತಕೆ ತಡವು?''

ಎಂದು ಅವರೇ ಒಂದು ಕಡೆ ಪ್ರಶ್ನಿಸಿದ್ದುಂಟು. ಪು.ತಿ.ನ. ಅವರ ಪ್ರಬಂಧಗಳಲ್ಲಿ ಅವರ ವ್ಯಕ್ತಿತ್ವ, ಅಭಿರುಚಿ, ಶ್ರದ್ಧೆ, ಮನಸ್ಸಿನ ಸ್ತರಗಳು, ಧರ್ಮದರ್ಶನ, ಪರಿಸರ ಪ್ರೇಮ, ನಾಡು ನುಡಿಯ ಬಗೆಗಿನ ಅಭಿಮಾನ, ಧರ್ಮ, ದರ್ಶನ ಮೊದಲಾದವುಗಳಿಗೆ ಪ್ರಾಂಜಲಮನಸ್ಸಿನಿಂದ ಸ್ಪಂದಿಸಿದ್ದಾರೆ. ಪು.ತಿ.ನ. ಸಂಪ್ರದಾಯದ ಒಣ ಆರಾಧಕರಲ್ಲ. ''ಜಾಳಿಗೆ ಬರಿದಾದರೇನು ಪೂಜೆಗೆ ಸಂದರೆ ಸರಿ. ಪೂಜೆಗೆ ತೋರಿಕೆ ಬೇಕೇ ಹೊರತು ಸತ್ಯ ಬೇಕಿಲ್ಲವಷ್ಟೇ'' ಎಂದು ವ್ಯಂಗ್ಯವಾಡಿದ್ದಾರೆ. ಅಷ್ಟೇ ಅಲ್ಲ'' ಕೊನೆಗೆ ನಾವು ಮಲಮೂತ್ರ ವಿಸರ್ಜನೆ ಮಾಡಬೇಕಾದರೂ ಈ ಶಾಸ್ತ್ರಕಾರರ ಸಮಯವನ್ನು ಕಾಯಬೇಕು'' ಎಂಬ ಮಾತು ಎಷ್ಟು ಗಂಭೀರವಾಗಿದೆ ನೋಡಿ. ಅವರ ಪ್ರಬಂಧಗಳಲ್ಲಿ ತಿಳಿಹಾಸ್ಯ ಲಾಸ್ಯವಾಡಿದೆ. ಅಲ್ಲಿ ಯಾವ ಕುಹಕಕ್ಕೆ ಎಡೆಯಿಲ್ಲ. ಯಾರ ನಿಂದೆಯೂ ಇಲ್ಲ. ಅವರದು ಶುದ್ಧ ಸಾತ್ವಿಕ ಹಾಸ್ಯ. ಪು.ತಿ.ನ. ಅವರ ಪದ್ಯದಷ್ಟೇ ಶಕ್ತಿಶಾಲಿ ಅವರ ಗದ್ಯ ಎಂದರೂ ತಪ್ಪಿಲ್ಲ. ಪು.ತಿ.ನ. ಅವರ ಪ್ರಬಂಧಗಳು ಗದ್ಯ ಕಾವ್ಯಗಳೇ ಆಗಿವೆ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ಪು.ತಿ.ನ. ಅವರ ಪ್ರಬಂಧಗಳಿಗೆ ಅನನ್ಯವಾದ ಸ್ಥಾನಮಾನ ಪ್ರಾಪ್ತವಾಗಿದೆ.

(ಕೃಪೆ : ಮುಂಬಯಿ ಆಕಾಶವಾಣಿ)

- ಡಾ. ಜಿ. ಎನ್. ಉಪಾಧ್ಯ

*ಸರ್ವ ಸದಸ್ಯರಿಗೆ, ಹಿತೈಷಿಗಳಿಗೆ*

*ಕ್ರಿಸ್‌ಮಸ್ ಹಬ್ಬ*

*ಹಾಗೂ*

*ನೂತನ ವರ್ಷದ*

*ಹಾರ್ದಿಕ ಶುಭಾಶಯಗಳು.*

## ನನ್ನ ಹಾಗೆಯೆ

ಮೊನ್ನೆ ನಡೆಯಿತಲ್ಲ ಬಾಹುಬಲಿಯ ಮಜ್ಜನ
ಬೆಟ್ಟದಲ್ಲಿ ಕೇಳತೊಡಗಿತು ಪುಟ್ಟ ಮಗುವು ಅಜ್ಜನ
''ಈತನಾರು ತಾತ ಇಲ್ಲಿ ನಿಂತು ನೋಡುತಿರುವನು?
ಇಂದ್ರಗಿರಿಯ ನೆತ್ತಿಯಲ್ಲಿ ಏನು ಮಾಡುತಿರುವನು?''
''ಇವನೆ ಬಾಹುಬಲಿಯು ಮಗು ! ಧೀರತನದ ಮೂರ್ತಿಯು!
ನುಡಿಯು ಹೊಳೆಗಳಲ್ಲಿ ತುಂಬಿ ಹರಿವುದಿವನ ಕೀರ್ತಿಯು
ಹತ್ತುವವರ ಇಳಿಯುವವರ ನಿಂತು ನೋಡುತಿರುವನು
ನಿಲ್ಲುವವರ ನಡೆಯುವವರ ಲೆಕ್ಕ ಮಾಡುತಿರುವನು
ಬಳಲಿದವರಿಗೆಲ್ಲ ಇಲ್ಲಿ ಕೈಯ ನೀಡುತಿರುವನು''
''ಇಲ್ಲಿ ಏಕೆ ಬಂದು ನಿಂತ? ಇಷ್ಟು ದೂರ ! ಎತ್ತರ !
ಭಯವಾಗದೆ ಇವನಿಗಿಲ್ಲಿ ಯಾರು ಇಲ್ಲ ಹತ್ತಿರ''
''ಇವನಿಗೆಲ್ಲಿ ಭಯವು ಮಗು ಅಭಯ ಮೂರ್ತಿ ಈತನು
ಭರತ ಚಕ್ರವರ್ತಿ ಇವನ ಅಣ್ಣ ಒಮ್ಮೆ ಆತನು
ಹಮ್ಮಿನಲ್ಲಿ ಬಂದು ಸೆಣಸಿ ತಮ್ಮನಲ್ಲಿ ಸೋತನು
ಗೆದ್ದ ರಾಜ್ಯ ಮರಳಿಸುತ್ತ ನುಡಿದನೊಂದು ಮಾತನು
ನೀನು ಸೋತುಗೆದ್ದೆ ಅಣ್ಣ ನಾನು ಗೆದ್ದು ಸೋತೆನು
ಬೆಟ್ಟ ಕರೆಯುತಿಹುದು ನನ್ನ ಮುಗಿಲು ತನ್ನ ಹತ್ತಿರ
ಯಾವುದುಂಟು ಅಣ್ಣ ಇಲ್ಲಿ ಜೀವವೇರದೆತ್ತರ?
ತಪಸ್ಸೊಂದೆ ತಿಳಿವುದೆಂದೆ ಹುಟ್ಟು ಸಾವಿನುತ್ತರ.
ನಿಂತು ಹಾಗೆ ನಿಂತುಕೊಂಡು ಘೋರ ತಪವ ಮಾಡಲು
ಹುಟ್ಟು ಸಾವಿನಾಚೆಗಿರುವ ಹೊಳೆವ ಹಾದಿ ನೋಡಲು
ಬಿಸಿಲು ಬಂತು ನೆರಳು ಬಂತು ಗಾಳಿ ಬಿಟ್ಟ ಬೀಸಿತು
ಒಮ್ಮೆ ಹಸಿರು ಒಮ್ಮೆ ಹೊನ್ನು ಹಚ್ಚಡವನು ಹಾಸಿತು
ಸೂರ್ಯನೊಮ್ಮೆ ಚಂದ್ರನೊಮ್ಮೆ ಸುತ್ತು ಹಾಕಿ ನಡೆದರು
ದೀಪದಂತೆ ನಿಂತ ಇವಗೆ ''ನಮೋ'' ಎಂದು ನುಡಿದರು
''ಇಷ್ಟು ಜನರು ಇಲ್ಲಿಗಿಂದು ಏಕೆ ಬಂದು ನೆರೆದರು?
ಬಾಹುಬಲಿ ಬಾಹುಬಲಿ ಎಂದು ಕರೆಯುತಿರುವರು
ಮಗೂ ಇಂದು ಇವನಿಗಿಲ್ಲಿ ಹಾಲಿನಲ್ಲಿ ಸ್ನಾನವು
ದಾರಿಯಲ್ಲಿ ದಣಿದ ಇವರಿಗೆ, ಇವನೊಂದೆ ಧ್ಯಾನವು
ಮುದ್ದು ಮುಖದಿ ಮುಗುಳ್ನಕ್ಕು ಸಿದ್ಧನಾಗಿ ನಿಂತಿಹ
ದುಗ್ಧಹಾಸದಲ್ಲಿ ನಲಿವ ಮುಗ್ಧ ಮಗುವಿನಂತಹ''
''ತಾತ,
ಎರೆವ ಮುಂಚೆ ಎಷ್ಟೆ ಹಚ್ಚಿ ಅಮ್ಮ ನನಗೆ ಹೀಗೆಯೇ
ನಿಲ್ಲಿಸುವಳು ಬಾಹುಬಲಿಯು ಕೂಡ ನನ್ನ ಹಾಗೆಯೆ
ನಿಂತು ಕಾಯುತಿರುವ ಕಣ್ಣು ತೆರೆದು ಮೊದಲ ಜೆಂಗೆ
ಗೊಮ್ಮಟೇಶ ನಕ್ಕು ಬಿಟ್ಟ ಕಂಡು ಮುಗ್ಧ ನಂಬಿಗೆ.

- ಸು. ರಂ. ಎಕ್ಕುಂಡಿ

### ಕವಿ ಕಾವ್ಯ ಪರಿಚಯ

ಸು. ರಂ. ಎಕ್ಕುಂಡಿಯವರ ಪೂರ್ಣ ಹೆಸರು ಸುಬ್ಬಣ್ಣ ರಂಗನಾಥ ಎಕ್ಕುಂಡಿ. ಇವರು ೧೯೨೩ರಲ್ಲಿ ಧಾರವಾಡ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಜನಿಸಿದರು. ಉತ್ತರ ಕನ್ನಡ ಜಿಲ್ಲೆಯ ಬಂಕಿಕೊಡ್ಲದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಇವರು ೩೧-೮-೧೯೭೫ರಲ್ಲಿ ನಿವೃತ್ತರಾದರು. ಇವರಿಗೆ ೧೯೭೪ರಲ್ಲಿ 'ಸೋವಿಯತ್ ಲ್ಯಾಂಡ್' ನೆಹರು ಪ್ರಶಸ್ತಿ, ೧೯೭೫ರಲ್ಲಿ ರಾಜ್ಯಶಿಕ್ಷಕ ಪ್ರಶಸ್ತಿಗಳು ಲಭಿಸಿವೆ. ಇವರ 'ಬಕುಲದ ಹೂಗಳು' ಕವನ ಸಂಕಲನಕ್ಕೆ ೧೯೯೨ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ.

ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಸಂತಾನ ಮೊದಲಾದವು ಎಕ್ಕುಂಡಿಯವರ ಕವನ ಸಂಕಲನಗಳು. ಕಥನಕವನ ಕ್ಷೇತ್ರಕ್ಕೆ ಇವರ ಕೊಡುಗೆ ವಿಶಿಷ್ಟವಾದುದು. ಶ್ರೀಯುತರು ೧.೮.೧೯೯೫ರಲ್ಲಿ ದೈವಾಧೀನರಾದರು.

# "ಮುಂಬಯಿ ಮತ್ತು ಮೈಸೂರು ಅಸೋಸಿಯೇಷನನ್ನು ನಾನು ಮರೆಯಲು ಸಾಧ್ಯವೇ ಇಲ್ಲ"
## - ವಿ.ಕೆ. ಮೂರ್ತಿ

**ಭಾರತೀಯ ಚಲನಚಿತ್ರ ರಂಗದ ಹೆಸರಾಂತ ಛಾಯಾಗ್ರಾಹಕ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮೈಸೂರು ಅಸೋಸಿಯೇಷನ್‌ನ ಸಾಂಸ್ಕೃತಿಕ ಕಾರ್ಯಕ್ರಮಗಳ ಜನಕ ಶ್ರೀ ವಿ.ಕೆ. ಮೂರ್ತಿಯವರೊಡನೆ ಒಂದು ಸಂದರ್ಶನ**

ಕರ್ನಾಟಕ ಸರ್ಕಾರವು ರಾಜ್ಯೋತ್ಸವ 2004 ರ ಪ್ರಶಸ್ತಿಗಳನ್ನು ಪ್ರಕಟಿಸಿದಾಗ ಆ ಪಟ್ಟಿಯಲ್ಲಿ ದ್ದವರಲ್ಲಿ ಚಲನಚಿತ್ರರಂಗದ ಹೆಸರಾಂತ ಛಾಯಾಗ್ರಾಹಕ ಶ್ರೀ ವಿ.ಕೆ. ಮೂರ್ತಿಯವರೂ ಒಬ್ಬರು. ಮುಂಬಯಿ ನಲ್ಲಿದ್ದು ಚಿತ್ರರಂಗದಲ್ಲಿ ಹೆಸರು ಪಡೆದು ಮೈಸೂರು ಅಸೋಸಿಯೇಷನ್‌ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸಿ ಎಲ್ಲರ ಪ್ರೀತಿ, ವಿಶ್ವಾಸ ಗೌರವವನ್ನು ಸಂಪಾದಿಸಿದ, ಈಗ ಬೆಂಗಳೂರು ನಿವಾಸಿಯಾದ ಶ್ರೀ ವಿ.ಕೆ. ಮೂರ್ತಿ ಯವರನ್ನು ಸಂದರ್ಶನ ಮಾಡಬೇಕೆಂದು ಅಪೇಕ್ಷಿಸಿದಾಗ, ಅತ್ಯಂತ ಪ್ರೀತಿ, ವಿಶ್ವಾಸದಿಂದ ನನ್ನನ್ನು ಬರಮಾಡಿಕೊಂಡರು. ಸುಮಾರು ಮೂರು ಗಂಟೆಗಳ ಕಾಲ ಮಾತುಕತೆ ನಡೆಸಿದೆವು. 81 ವರ್ಷ ವಯಸ್ಸಾಗಿದ್ದು ಸ್ವಲ್ಪ ಅಸ್ವಸ್ಥರಂತೆ ಕಂಡರೂ ಮುಂಬಯಿ ಮತ್ತು ಅಸೋಸಿಯೇಷನ್ ವಿಷಯ ಬಂದಾಗ ಭಾವೋದ್ರೇಕರಾಗಿ ಯುವಕರಂತೆ ಉತ್ಸಾಹದಿಂದ ತಮ್ಮ ಅನುಭವಗಳನ್ನು ವಿವರಿಸುತ್ತಿದ್ದರು.

**● ಮೂರ್ತಿಯವರೇ ತಾವು ಪ್ರಖ್ಯಾತರಾಗಿದ್ದರೂ, ಇಂದಿನ ಪೀಳಿಗೆಗೆ ತಮ್ಮ ಪೂರ್ವೋತ್ತರ ಅಷ್ಟಾಗಿ ತಿಳಿದಿಲ್ಲ. ಆದ್ದರಿಂದ ತಮ್ಮ ಚಿಕ್ಕಂದಿನ ವಿವರಗಳನ್ನು ತಿಳಿಸುವಿರಾ?**

- ಅಗತ್ಯವಾಗಿ. ನಾನು ಮೈಸೂರಿನವನು. ತಂದೆ ವೆಂಕಟರಮಣ ಪಂಡಿತರು. ತಾಯಿ ನಾಗಮ್ಮ. ನನ್ನ ಆರಂಭಿಕ ವಿದ್ಯಾಭ್ಯಾಸ ಮೈಸೂರಿನಲ್ಲಿ ಶಾರದ ವಿಲಾಸ್ ಹೈಸ್ಕೂಲಿನಲ್ಲಿ ಮೆಟ್ರಿಕ್‌ವರೆಗೂ ಆಯಿತು. ಮುಂದೆ ಬೆಂಗಳೂರಿನಲ್ಲಿರುವ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಇನ್ಸ್ಟಿಟ್ಯೂಟ್‌ನಲ್ಲಿ ಆಗ ತಾನೇ ಪ್ರಾರಂಭವಾಗಿದ್ದ Cinemotography courseಗೆ ಸೇರಿ ಅದನ್ನು ಪೂರೈಸಿದೆ.

**● ನಿಮ್ಮ ಚಲನ ಚಿತ್ರ ಛಾಯಾಗ್ರಾಹಕ ಜೀವನ ಹೇಗೆ ಪ್ರಾರಂಭವಾಯಿತು?**

- Cinematography courseನ Final yearನಲ್ಲಿ practical Trainingಗೆ ಮುಂಬಯಿಗೆ ಬಂದೆವು. ಅಲ್ಲಿ ಜಯಂತ್ ದೇಸಾಯಿ Studiosದಲ್ಲಿ 3 ತಿಂಗಳು Training ಪಡೆದು ನಂತರ ಪರೀಕ್ಷೆಗಾಗಿ ಬೆಂಗಳೂರಿಗೆ ಬಂದು ಅದನ್ನು ಪೂರೈಸಿಕೊಂಡು ವಾಪಸ್ಸು ಮುಂಬಯಿಗೆ ಬಂದ ಮೇಲೆ ಅಲ್ಲೇ ನನಗೆ ಕೆಲಸ ದೊರಕಿತು. ಕೆಲವು ಕಾಲ ಅಲ್ಲಿ ಕೆಲಸ ಮಾಡಿದ ನಂತರ ಆಮ್ರಪಾಲಿ ಚಿತ್ರಕ್ಕೆ ಛಾಯಾ ಗ್ರಾಹಕರಾಗಿದ್ದ ಫಾಲಿ ಮಿಸ್ತ್ರಿಯವರು ಪರಿಚಯವಾಗಿ ಆ ಚಿತ್ರಕ್ಕೆ ಸಹಾಯಕನಾಗಿ ಕಾರ್ಯ ನಿರ್ವಹಿಸಿದ ಮೇಲೆ, 4 ವರ್ಷಗಳ ಕಾಲ ಅವರೊಡನಿದ್ದು, ಆಮ್ರಪಾಲಿ, ಮೇಲಾ, ಬಾಬುಲ್, ಜಾನ್ ಪೆಹಚಾನ್ ಚಿತ್ರಗಳಿಗೆ ಅವರಿಗೆ ಸಹಕರಿಸಿದೆ.

**● ಚಲನ ಚಿತ್ರರಂಗದಲ್ಲಿ ನಿಮಗೂ, ಗುರುದತ್‌ರವರಿಗೂ ನಿಕಟ ಸಂಬಂಧವಿದೆ. ಅದು ಹೇಗಾಯಿತು?**



ವಿ.ಕೆ.ಮೂರ್ತಿ ಮತ್ತು ಅವರ ಪತ್ನಿ ಸಂಧ್ಯಾ

- ಚೇತನ್ ಆನಂದ್ ತಯಾರಿಸುತ್ತಿದ್ದ ಬಾಜಿ ಚಿತ್ರವನ್ನು ಗುರುದತ್ ನಿರ್ದೇಶಿಸುತ್ತಿದ್ದರು. ಅದಕ್ಕೆ ಛಾಯಾಗ್ರಾಹಕರಾಗಿದ್ದ ರಾತ್ರಿ ಅವರ ಪರಿಚಯವಾಗಿ ಅವರಿಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದಾಗ, ಗುರುದತ್‌ರವರು ನನ್ನ ಕಾರ್ಯವೈಖರಿಯನ್ನು ಸೂಕ್ಷ್ಮವಾಗಿ ಗಮನಿಸಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಮತ್ತೆ ಅಲ್ಲಿಂದ ಮುಂದೆ ತಮ್ಮ ಚಿತ್ರಗಳಲ್ಲಿ ಸ್ವತಂತ್ರ ಛಾಯಾಗ್ರಾಹಕನಾಗಿ ನೇಮಕ ಮಾಡಿಕೊಂಡರು.

**● ಅವರೊಡಗೂಡಿ ನಿರ್ಮಿಸಿದ ಚಿತ್ರಗಳು ಯಾವುವು?**

-ಜಾಲ್, ಸಿ.ಐ.ಡಿ., ಆರ್‌ಪಾರ್, ಮಿಸ್ಟರ್ ಅಂಡ್ ಮಿಸೆಸ್ 55, ಪ್ಯಾಸಾ, ಸಾಹಿಬ್ ಬೀಬಿ ಔರ್ ಗುಲಾಮ್ ಮತ್ತು ಸಿನಿಮಾಸ್ಕೋಪ್ ಚಿತ್ರ ಕಾಗಜ್‌ಕೆ ಫೂಲ್.

**● ಕಾಗಜ್ ಕೆ ಫೂಲ್ ಭಾರತದ ಮೊಟ್ಟ ಮೊದಲನೇ ಸಿನಿಮಾಸ್ಕೋಪ್ ಚಿತ್ರ ಅದನ್ನು ಚಿತ್ರೀಕರಿಸಿದ ಕೀರ್ತಿ ತಮ್ಮದು. ಇದರ ಬಗ್ಗೆ ನಿಮಗೇನು ಅನಿಸಿತು?**

- ಗುರುದತ್‌ರವರು ಈ ಯೋಜನೆಯನ್ನು ಮುಂದಿಟ್ಟಾಗ ನಾನು ಅದನ್ನು ಸ್ವೀಕರಿಸಿದೆ. ಯಾರಿಂದಲೂ ತರಬೇತಿ ಪಡೆಯಲಿಲ್ಲ, ಸ್ವತಂತ್ರವಾಗಿ ನಿರ್ವಹಿಸಿದೆ. ಚಿತ್ರ ಯಶಸ್ಸು ಕಂಡಿತು. ಫಿಲ್ಮ್‌ಫೇರ್ ಅವಾರ್ಡ್ ಮುಂತಾದ ಅನೇಕ ಪ್ರಶಸ್ತಿಗಳು ದೊರಕಿದುವು. ಭಾರತದಲ್ಲಿ ಒಬ್ಬ ಉತ್ತಮ ಛಾಯಾಗ್ರಾಹಕ ನೆಂದು ಗುರುತಿಸಲ್ಪಟ್ಟೆ. ಇದಾದನಂತರ ಕಲರ್‌ಫಿಲ್ಮ್ ಬಗ್ಗೆ ಅನುಭವ ಪಡೆಯಲು, ಗುರುದತ್ ನನ್ನನ್ನು ಲಂಡನ್‌ಗೆ ಕಳುಹಿಸಿದರು. ಅಲ್ಲಿ Guns of Navrone ಛಾಯಾಗ್ರಹಣ ಮಾಡುತ್ತಿದ್ದ Oswald Marrie ಯವರೊಡನೆ ಕೆಲವು ಕಾಲ ನಿರೀಕ್ಷಕನಾಗಿದ್ದು, ಅಲ್ಲಿಯ Technical Colour Laboratoryಯ ಕಾರ್ಯ ಕಲಾಪಗಳನ್ನು ವೀಕ್ಷಿಸಿ ಹಿಂದಿರುಗಿದೆ.

**● ಗುರುದತ್ ದಿವಂಗತರಾದ ಮೇಲೆ ತಾವು ಯಾರಲ್ಲಿ ಕಾರ್ಯ ನಿರ್ವಹಿಸಿದಿರಿ?**

- ನಾನು ಸ್ವತಂತ್ರ ಛಾಯಾ ಗ್ರಾಹಕನಾಗಿದ್ದುದರಿಂದ ಅನೇಕ ಆಹ್ವಾನಗಳು ಬರುತ್ತಿದ್ದುವು. ಪಾಕೀಜಾ ಚಿತ್ರ ಅದರಲ್ಲಿ ಮುಖ್ಯವಾದುದು. ಅನೇಕ ಟಿ.ವಿ. ಸೀರಿಯಲ್‌ಗಳಿಗೆ ಕಾರ್ಯನಿರ್ವಹಿಸಿದ್ದೇನೆ.

**● ಬೆಂಗಳೂರಿಗೆ ಬಂದು ನೆಲೆಸಿದ್ದು ಯಾವಾಗ ಮತ್ತು ಕಾರಣವೇನು?**

- 1998 ರ ವರೆಗೆ ಮುಂಬಯಿನಲ್ಲಿ ಚಟುವಟಿಕೆಯಿಂದಿದ್ದೆ. ನಂತರ ಆರೋಗ್ಯ ಸ್ವಲ್ಪ ಕೆಟ್ಟಿದ್ದರಿಂದ 2002ರಲ್ಲಿ ಬೆಂಗಳೂರಿಗೆ ಬಂದು ನೆಲೆಸಿದೆ.


**● ತಾವು ಮೈಸೂರು ಅಸೋಸಿಯೇಷನ್‌ನಲ್ಲಿ ನಾಟಕ, ಸಂಗೀತ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಿರಿ. ಸಂಗೀತದ ಬಗ್ಗೆ ಆಸಕ್ತಿ ಹೇಗೆ ಬಂತು?**

- ನಾನು ಮೈಸೂರಿನಲ್ಲಿದ್ದಾಗ ಚಿಕ್ಕ ವಯಸ್ಸಿನಲ್ಲೇ ಸಂಗೀತದ ಬಗ್ಗೆ ಆಸಕ್ತಿ ಮೂಡಿತು. ವಿದ್ವಾನ್ ಬಿ. ಕೇಶವ ಮೂರ್ತಿಗಳಿಂದ 12 ವರ್ಷ ಪಿಟೀಲು ಕಲಿಕೆ. ಹೈಸ್ಕೂಲಿನಲ್ಲಿ ಸಂಗೀತವನ್ನು Optional Subject ಆಗಿ ತೆಗೆದುಕೊಂಡೆ. ಅಲ್ಲಿ ನನ್ನ ಗುರುಗಳು ವಿದ್ವಾನ್ ಚೆನ್ನಕೇಶವಯ್ಯನವರು. ವಿದ್ವಾನ್ ದೇವೇಂದ್ರಪ್ಪ ಮತ್ತು ವಿದ್ವಾನ್ ವೆಂಕಟಗಿರಿಯಪ್ಪನವರು ಪರೀಕ್ಷಕರಾಗಿದ್ದ ಪರೀಕ್ಷೆಯಲ್ಲಿ 80% ಪಡೆದು ಅವರುಗಳಿಂದ ಮೆಚ್ಚುಗೆ ಪಡೆದೆ. ಮುಂಬಯಿಯಲ್ಲಿ ಕೆಲವು ಕಾಲ ರಾಮಗೋಪಾಲ್ ಭರತನಾಟ್ಯ ತಂಡಕ್ಕೆ ಪಿಟೀಲು ವಾದಕನಾಗಿ ಸಹಕರಿಸಿದೆ.

**● ಮೈಸೂರು ಅಸೋಸಿಯೇಷನ್‌ನಲ್ಲಿ ನಿಮ್ಮ ಅನುಭವಗಳನ್ನು ವಿವರಿಸುವಿರಾ?**

- ಮೊದಲೇ ಹೇಳಿದಂತೆ 1945ಕ್ಕೆ ಮುಂಬಯಿಗೆ ಬಂದೆ. 1946ರಲ್ಲಿ ಅಸೋಸಿಯೇಷನ್ ಸದಸ್ಯನಾದೆ. ಅಲ್ಲೇ ಊಟ ಮಾಡುತ್ತಿದ್ದೆ. ಆಗ ಅಲ್ಲಿ Card Section, Table Tennis, Billiards, Reading Room ಮಾತ್ರ ಇತ್ತು. ಸಾಂಸ್ಕೃತಿಕ ಚಟುವಟಿಕೆಗಳು ಇರುತ್ತಿರಲಿಲ್ಲ.

**● ಅಸೋಸಿಯೇಷನ್‌ನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಹೇಗೆ ಪ್ರಾರಂಭವಾಯಿತು ಎಂಬುದನ್ನು ತಿಳಿಸುವಿರಾ?**



ವಿ.ಕೆ.ಮೂರ್ತಿ ಮತ್ತು ಗುರುದತ್ ಚಿತ್ರೀಕರಣದ ಸಂದರ್ಭದಲ್ಲಿ

- ನನಗೆ ಪಿಟೀಲು ನುಡಿಸುವುದು ಬರುತ್ತದೆಂದು ಕೆಲವರಿಗೆ ಗೊತ್ತಿತ್ತು. ಹಿರಿಯ ಸದಸ್ಯರಾದ ರಾಜಗೋಪಾಲ್‌ರವರೂ ಮತ್ತು TRS Anandamರವರೂ ನಾನು ಪಿಟೀಲು ನುಡಿಸಬೇಕೆಂದು ಪ್ರೇರೇಪಿಸಿದರು. ನಿಗದಿ ಪಡಿಸಿದ ದಿನ ನಾನು ಒಂದು ಗಂಟೆಕಾಲ ಶಾಸ್ತ್ರೀಯ ಸಂಗೀತ ನುಡಿಸಿದೆ. ಆನಂದರವರೇ ತಮಗೆ ತಿಳಿದ ರೀತಿಯಲ್ಲಿ ತಬಲಾ ನುಡಿಸಿದರು. ನಂತರ ಮತ್ತೊಂದು ಗಂಟೆ ಸಿನಿಮಾ ಗೀತೆಗಳನ್ನು ನುಡಿಸಿದೆ ಎಲ್ಲರೂ ಸಂತೋಷ ಪಟ್ಟರು. ಮತ್ತೆ ನನಗೂ ಪ್ರಚಾರ ಸಿಕ್ಕಿತು.

ನಂತರ ನಾಟಕಗಳ ಕಡೆ ಗಮನ ಹರಿಸಿದೆವು. ಮೊದಲು ಪ್ರದರ್ಶಿಸಿದ ನಾಟಕ ಗಗ್ಗಯ್ಯನ ಗಡಿಬಿಡಿ. ನನ್ನ ಸಹಪಾಠಿಗಳೂ ಮತ್ತು ಚಲನಚಿತ್ರರಂಗದ ಹೆಸರಾಂತ ಛಾಯಾಗ್ರಾಹಕರೂ ಆದ ಲಕ್ಷ್ಮೀ ರಮೇಶ್, ಪುಟ್ಟಣ್ಣ, ಸಂಪತ್ ಮುಂತಾದವರು ನಾಟಕದಲ್ಲಿ ಸಹಕರಿಸಿದರು. ಆಗಿನ ಕಾಲಕ್ಕೆ ಸ್ತ್ರೀ ಪಾತ್ರ ಮಾಡಲು ಸ್ತ್ರೀಯರು ಮುಂದೆ ಬರುತ್ತಿರಲಿಲ್ಲ. ಗಂಡಸರೇ ಮಾಡಬೇಕಿತ್ತು. ಒಂದೊಂದು ಸಲ ಆನಂದಂ ಅಭಿನಯಿಸುತ್ತಿದ್ದರು. ಬಹದ್ದೂರ್ ಗಂಡ, ಬಂಟ್ಟಾಳವಿಲ್ಲದ ಬಡಾಯಿ ನಾಟಕಗಳನ್ನು ಪ್ರದರ್ಶಿಸಿದೆವು. 1952ರಲ್ಲಿ ಮಧುರಾ ಕೃಷ್ಣಸ್ವಾಮಿ ಪ್ರಥಮ ಬಾರಿಗೆ ಸ್ತ್ರೀ ಪಾತ್ರ ವಹಿಸಿದರು. ಮಹಾಲಕ್ಷ್ಮಿ ಸ್ವಾಮಿಯವರು 8-10 ವರ್ಷಗಳು ನಾಟಕದಲ್ಲಿ ಅಭಿನಯಿಸಿ ಸಹಕರಿಸುತ್ತಿದ್ದರು.

● ತಾವು ಸ್ವತಂತ್ರವಾಗಿ ಬರೆದು ನಿರ್ದೇಶಿಸಿದ ನಾಟಕಗಳು ಯಾವುವು?

- ವರ್ಣಾಂಧ, ನವಗ್ರಹ, ಪ್ರಗತಿ, ನಂದಿಮಹಲ್, ಗಂಡಾಂತರ. 1982ರಲ್ಲಿ ನಾನು ಅಭಿನಯಿಸಿದ ನವಗ್ರಹ ನನ್ನ ಕೊನೆಯ ನಾಟಕ.

● ಪ್ರತಿಗಣಪತಿ ಉತ್ಸವದಲ್ಲೂ ತಾವು ಶಾಸ್ತ್ರೀಯ ವಾದ್ಯವೃಂದ ತಯಾರಿಸಿ ಕಾರ್ಯಕ್ರಮ ನೀಡುತ್ತಿದ್ದೀರಿ. ಅದು ಹೇಗೆ ಸಾಧ್ಯವಾಯಿತು?

- ಮೊದಲೇ ತಿಳಿಸಿದಂತೆ ನನಗೆ ಪಿಟೀಲು ಬರುತ್ತದೆ ಎಂದು ತಿಳಿದ ಮೇಲೆ ಸದಸ್ಯರ ಪ್ರೇರಣೆಯಂತೆ ಗಣಪತಿ ಉತ್ಸವದಲ್ಲಿ ನನ್ನ ಪಿಟೀಲು ವಾದನದ ಕಚೇರಿ ಇರುತ್ತಿತ್ತು. ನಂತರ ಸದಸ್ಯರ ಪ್ರತಿಭೆಯನ್ನು ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪ್ರತಿಭೆ ಇರುವವರನ್ನು ಆರಿಸಿಕೊಂಡು ವಾದ್ಯ ವೃಂದವನ್ನು ತಯಾರಿಸಿ ಕಾರ್ಯಕ್ರಮ ಕೊಡುವ ಪದ್ಧತಿ ಮಾಡಿದೆವು. ಶ್ರೀಮತಿ ಲಕ್ಷ್ಮೀ ದಾಸಪ್ಪ (ಪಿಟೀಲು) ಶ್ರೀಮತಿ ರತ್ನ ಶ್ರೀಕಂಠಯ್ಯ ಮತ್ತು ಶ್ರೀಮತಿ ವಲ್ಲಿ ಗೋಪಾಲ್ (ವೀಣೆ) ಮುಂತಾದವರು ಸಹಕರಿಸುತ್ತಿದ್ದರು. ಈ ವಾದ್ಯ ವೃಂದವನ್ನು ನಾವು ಸುಮಾರು 20 ವರ್ಷ ನಡೆಸಿದೆವು.

● ನೀವು ಅಂದು ನೋಡಿದ ಅಸೋಸಿಯೇಷನ್‌ಗೂ ಈಗಿರುವ ಅಸೋಸಿಯೇಷನ್‌ಗೂ ಯಾವ ರೀತಿ ವ್ಯತ್ಯಾಸ ಕಾಣುತ್ತೀರಿ?

-ಚಟುವಟಿಕೆಗಳು ನಡೆಯುತ್ತಾ ಇದೆ. ಆಸಕ್ತಿಯುಳ್ಳ ಸದಸ್ಯರು ಈಗಲೂ ಅಸೋಸಿಯೇಷನ್ ಏಳಿಗೆಗೆ ಶ್ರಮಪಡುತ್ತಿದ್ದಾರೆ. ಇದು ಸ್ತುತ್ಯಾರ್ಹ. ಇಂದು ತನ್ನದೇ ಆದ ಸುಸಜ್ಜಿತ ಹವಾನಿಯಂತ್ರಿತ ಸಭಾಗೃಹವನ್ನು ಹೊಂದಿರುವುದು ಹೆಮ್ಮೆಯಾಗಿದೆ. ಈ ಯೋಜನೆಯನ್ನು ಕಾರ್ಯಗತ ಮಾಡಿದ ಡಾ. ಮಂಜುನಾಥ್, ಮಂಜುನಾಥಯ್ಯ ಮತ್ತು ಅವರ ತಂಡದವರು ಅಭಿನಂದನಾರ್ಹರು.

● ರಾಜ್ಯೋತ್ಸವ ಪ್ರಶಸ್ತಿ ತಮಗೆ ಎಂದೋ ಬರಬೇಕಿತ್ತು. ತಡವಾಗಿ ಬಂದಿದ್ದಕ್ಕೆ ತಮಗೆ ಬೇಜಾರಿಲ್ಲವೆ?

- ಹಾಗೇನಿಲ್ಲ. ನಾನು ಯಾವುದನ್ನೂ ನಿರೀಕ್ಷಿಸುವವನಲ್ಲ. ಸಾಕಷ್ಟು ಪ್ರಶಸ್ತಿಗಳು ಪುರಸ್ಕಾರಗಳು ದೊರಕಿವೆ. ರಾಜ್ಯೋತ್ಸವ ಪ್ರಶಸ್ತಿ ದೊರಕಿದ್ದಕ್ಕೆ ಸಂತೋಷವೂ ಆಗಿದೆ.

● ಇಂದಿನ ಯುವ ಪೀಳಿಗೆಗೆ ನಿಮ್ಮ ಸಂದೇಶವೇನು?

- ಸಂದೇಶ ಕೊಡುವಷ್ಟು ದೊಡ್ಡ ವ್ಯಕ್ತಿ ನಾನಲ್ಲ. ಕಳೆದ 60 ವರ್ಷಗಳಿಂದ ಮುಂಬಯಿ ಮತ್ತು ಮೈಸೂರು ಅಸೋಸಿಯೇಷನ್‌ನಲ್ಲಿ ಪಡೆದ ಅನುಭವಗಳನ್ನು ನಾನು ಮರೆಯುವಂತಿಲ್ಲ. ಮೈಸೂರಿನ ಕಲೆ, ಸಂಸ್ಕೃತಿ ಉತ್ತಮವಾದುದು. ಇದನ್ನು ಉಳಿಸಲು ಬೆಳೆಸಲು ಎಲ್ಲ ಸದಸ್ಯರೂ ಪ್ರಯತ್ನ ಪಡಬೇಕೆಂಬುದೇ ನನ್ನ ಆಶಯ.

● ಸಂದರ್ಶನ ನೀಡಿದ್ದಕ್ಕೆ ಧನ್ಯವಾದಗಳು. ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವುದಕ್ಕಾಗಿ 'ನೇಸರು' ನಿಮ್ಮನ್ನು ಅಭಿನಂದಿಸುತ್ತದೆ.

- ಬಿ.ನಾಗಭೂಷಣ್

## ಸಂಗೀತ ವಿದುಷಿ ಶ್ರೀಮತಿ ಉಮಾ ನಾಗಭೂಷಣ್‌ಗೆ 'ಸಮಾಜರತ್ನ' ಪ್ರಶಸ್ತಿ

ಬೆಂಗಳೂರಿನ ಜ್ಞಾನ ಮಂದಾರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಕಾಡೆಮಿಯು 20ನೇ ವರ್ಷ ಪ್ರತಿಭೋತ್ಸವ 2004ರ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ರಾಜ್ಯಮಟ್ಟದ 30 ಗಣ್ಯರಿಗೆ ಸಮಾಜರತ್ನ ಪ್ರಶಸ್ತಿಯನ್ನಿತ್ತು ಸತ್ಕರಿಸಿತು.

ಈ ಸಂದರ್ಭದಲ್ಲಿ ಮುಂಬಯಿಯಲ್ಲಿ ಹೊರನಾಡ ಕನ್ನಡಿತಿಯಾಗಿ, ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಪರಿಗಣಿಸಿ ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದ ಸ್ಥಾಪಕರೂ, ಪ್ರಾಂಶುಪಾಲರೂ ಆದ ವಿದುಷಿ ಉಮಾನಾಗ 'ಭೂಷ್‌ರವರಿಗೆ ಸಹ ಸಮಾಜರತ್ನ ಪ್ರಶಸ್ತಿಯನ್ನಿತ್ತು ಸತ್ಕರಿಸಿದರು.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮಾಜೀ ನಿರ್ದೇಶಕರೂ ಹಾಗೂ ಕರ್ನಾಟಕ ಉಗ್ರಾಣ ನಿಗಮ ಮಂಡಳಿಯ ಈಗಿನ ವ್ಯವಸ್ಥಾಪಕ ನಿರ್ದೇಶಕರೂ ಆದ ಡಾ. ಸಿ. ಸೋಮಶೇಖರ್‌ರವರು ಪ್ರಶಸ್ತಿ ಪ್ರದಾನವನ್ನು ನೆರವೇರಿಸಿದರು. ಪುಷ್ಪಹಾರ, ಫಲತಾಂಬೂಲ, ಶಾಲು ಸ್ಮರಣಿಕೆ ಮತ್ತು ಸನ್ಮಾನ ಪತ್ರವನ್ನಿತ್ತು ವಿಜೇತರನ್ನು ಸತ್ಕರಿಸಿದರು. ಕಾಂಗ್ರೆಸ್ ಶಾಸಕಿ ಶ್ರೀಮತಿ ಅಮಿತಾ



ರೆಡ್ಡಿ, ಬೆಂಗಳೂರು ನಗರಪಾಲಿಕೆಯ ಮಹಾ ಪೌರ ಶ್ರೀ ರಮೇಶ್, ಚಲನಚಿತ್ರ ಸಾಹಿತಿ ಕುಣಿಗಲ್ ನಾಗಭೂಷಣ್ ವೇದಿಕೆಯಲ್ಲಿ ಉಪಸ್ಥಿತರಿದ್ದರು

ಜ್ಞಾನ ಮಂದಾರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಕಾಡೆಮಿಯು ಕಳೆದ 20 ವರ್ಷಗಳಿಂದ ಶಾಲೆ, ಕಾಲೇಜು, ಶಿಕ್ಷಣ ಸಂಸ್ಥೆಗಳನ್ನಲ್ಲದೆ ಸಂಗೀತ, ನಾಟ್ಯ ಮುಂತಾದ ಸಾಂಸ್ಕೃತಿಕ ಶಿಕ್ಷಣಗಳನ್ನೂ ನಡೆಸುತ್ತಿದೆ.

# ಡಾ. ಸಾ. ಶಿ. ಮರುಳಯ್ಯನವರೊಂದಿಗೆ ಸಂದರ್ಶನ

ಸಂದರ್ಶಕರು : ಶ್ರೀ ಎಂ. ವಿ. ನಾಗರಾಜರಾವ್

ಡಾ. ಸಾ.ಶಿ. ಮರುಳಯ್ಯ ಕಾವ್ಯ, ಪ್ರಬಂಧ, ನಾಟಕ, ವಿಮರ್ಶೆ, ಅನುವಾದ, ರೂಪಾಂತರ, ಶರಣಸಾಹಿತ್ಯ, ದಾಸ ಸಾಹಿತ್ಯಗಳ ಬಗೆಗೆ ವಿಶೇಷ ಅಧ್ಯಯನ - ಹೀಗೆ ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸತ್ವಪೂರ್ಣ ಕೃತಿಗಳನ್ನು ರಚಿಸಿ, ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮ ಅಮೂಲ್ಯ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಸರಸ ಶೈಲಿ, ನವಿರಾದ ಹಾಸ್ಯ, ಆಳವಾದ ಚಿಂತನ, ಪರಿಶುದ್ಧ ಕಲ್ಪನೆ ಡಾ. ಸಾ.ಶಿ. ಮ. ಅವರ ಬರವಣಿಗೆಯ ವೈಶಿಷ್ಟ್ಯ ಎನ್ನಬಹುದು. ಇದು ಬಹಳ ಹಳೆಯ ಸಂದರ್ಶನ. ಇತ್ತೀಚೆಗೆ ಡಾ. ಸಾ.ಶಿ.ಮ. ಅವರು ಮೈಸೂರು ಅಸೋಸಿಯೇಶನ್‌ಗೆ ಭೇಟಿ ಇತ್ತಿದ್ದರು. ಅದರ ಹಿನ್ನೆಲೆಯಲ್ಲಿ ಈ ಸಂದರ್ಶನವನ್ನು ಪುನಃ ಪ್ರಕಟಿಸುತ್ತಿದ್ದೇವೆ.

**ಪ್ರ.: ಸಾಹಿತ್ಯದ ಬಗ್ಗೆ ಒಲವು ಮೂಡಲು ನಿಮಗೆ ಪ್ರೇರಣೆ ನೀಡಿದ ಸಂದರ್ಭವನ್ನು ಹೇಳಿ.**

ಉ.: ನನ್ನ ತಂದೆ ನನ್ನ ಮೊದಲ ಗುರು. ಅವರು ಕೂಲಿ ಮಠದ ಓಜಯ್ಯನವರಾಗಿದ್ದರು. ಅಮರ ಕಲಿಸುತ್ತಿದ್ದರು. ಲಕ್ಷ್ಮೀಶ ಷಡಕ್ಷರಿಯರನ್ನು ಓದಿಸುತ್ತಿದ್ದರು. ಕಾವ್ಯ ಸೌಂದರ್ಯವನ್ನು ಕಂಡು ಬೆರಗಾದ ನಾನು ಕೇಳಿದೆ, 'ಅಪ್ಪಾಜಿ ಇಂತಹ ಕಾವ್ಯಗಳನ್ನು ಮನುಷ್ಯರು ಬರೆಯುತ್ತಾರೊ ಅಥವಾ ದೇವತೆಗಳೊ' ಎಂದು. ಅಪ್ಪಾಜಿ ಹೇಳಿದರು. 'ಮನುಷ್ಯರೇ, ದೇವತೆಗಳಲ್ಲ'. 'ಹಾಗಾದರೆ ನಾನೂ ಬರೆಯಬಹುದು? ಬರೆಯ ಬಲ್ಲೆನೆ?' 'ಬರೆಯ ಬಹುದು, ಬರೆಯಬಲ್ಲ ಪ್ರತಿಭೆ ಸಾಮರ್ಥ್ಯಗಳಿದ್ದರೆ!' ಅವರ ಮಾತಿನ ಅರ್ಥ ಆಗ ನನಗಾಗಿರಲಿಲ್ಲ. ಆದರೂ ಬರೆಯಲು ಪ್ರಯತ್ನಿಸಿದೆ ನಾನು ಹೈಸ್ಕೂಲಿಗೆ ಹೋದಾಗ. ಅವೆಲ್ಲಾ ಬಾಲಿಶ ಬರೆಹಗಳೆಂದು ತಿಳಿಯಿತು, ಬಿಸಾಡಿದೆ.

ನನ್ನ ತಂದೆಯವರೇ ನನ್ನ ಸಾಹಿತ್ಯದ ಒಲವು ನಿಲವುಗಳಿಗೆ ಮೂಲ ಪ್ರೇರಕ ಶಕ್ತಿ.

**ಪ್ರ.: ದೀರ್ಘಕಾಲ ನೀವು ಅಧ್ಯಾಪಕರಾಗಿ ಕೆಲಸ ಮಾಡಿದ್ದೀರಿ. ಸೇವೆ ನಿಮಗೆ ತೃಪ್ತಿ ತಂದಿದೆಯೇ?**

ಉ.: ಖಂಡಿತವಾಗಿ. ಸಾಕ್ರೆಟೀಸನನ್ನು ಅಥೆನ್ಸ್‌ನಲ್ಲಿ ಯಾರೋ ಕೇಳಿದರಂತೆ: 'ಇಷ್ಟು ತತ್ತ್ವ ಬೋಧಕನಾದ ನೀನು ಯಾವುದಾದರೂ ಶಾಲೆಯಲ್ಲಿ ಅಧ್ಯಾಪಕನಾಗಿದ್ದೀಯಾ?' ಎಂದು. ಸಾಕ್ರೆಟೀಸ್ ಹೇಳಿದನಂತೆ 'ಆ ಭಾಗ್ಯ ನನಗಿಲ್ಲ' ಎಂದು. ಆದರೆ ಆ ಭಾಗ್ಯ ನನಗಿದೆ. ನನಗೆ ಚಿಕ್ಕಂದಿನಿಂದಲೂ ನನ್ನ ತಂದೆಯಂತೆ ಓರ್ವ ಅಧ್ಯಾಪಕನೇ ಆಗಬೇಕೆಂಬ ಹಂಬಲ ಇತ್ತು; ಆದೆ. ಅಧ್ಯಾಪಕ ವೃತ್ತಿ ತುಂಬಾ ಪವಿತ್ರವಾದದ್ದು. ಅದರಲ್ಲಿ ನನಗೆ ತೃಪ್ತಿ ಇದೆ, ಭಕ್ತಿ ಇದೆ.

**ಪ್ರ.: ಜನರು ನಿಮ್ಮನ್ನು ಕವಿ ಎಂದೇ ಗುರುತಿಸುತ್ತಾರೆ. ಆದರೆ ನೀವು ಕನ್ನಡದ ಬೇರೆ ಬೇರೆ ಪ್ರಕಾರಗಳಲ್ಲಿಯೂ ಹೆಚ್ಚು ಕೆಲಸ ಮಾಡಿದ್ದೀರಿ. ಈ ಬಗ್ಗೆ ನಿಮ್ಮ ಅನಿಸಿಕೆ ಏನು?**

ಉ.: ಕವಿ ಹೃದಯಕ್ಕೆ ಕವನವೊಂದೇ ಸಾಧನವಲ್ಲ. ಅನಿಸಿಕೆ ಅಭಿವ್ಯಕ್ತಿಗೆ ಯಾವುದೇ ಪ್ರಕಾರ ಆಗಬಹುದು. ನನಗೆ ಪದ್ಯವೆಂದರೆ ಪ್ರೀತಿ, ಗದ್ಯವೆಂದರೆ ಮೆಚ್ಚು.

**ಪ್ರ.: ನಿಮ್ಮ ಕಾವ್ಯಗಳಲ್ಲಿ ಭಾವತೀವ್ರತೆ ಹೆಚ್ಚು ಎನ್ನುವ ಮಾತು ಇದೆ. ರಸಾಸ್ವಾದನೆಗೆ ಇದು ಎಷ್ಟು ಸಹಾಯಕ ಎನ್ನುವಿರಿ?**

ಉ.: ಭಾವತೀವ್ರತೆ ಅಥವಾ ಭಾವಾವೇಶವಿಲ್ಲದೆ 'ಭಾವಗೀತೆ'ವಾಗುವುದಿಲ್ಲ. ಭಾವದ ಕಾವು, ನಾದದ ಮೋದ ಎರಡೂ ಇರಬೇಕಲ್ಲವೆ ! ಅವು ಇವೆ ನನ್ನ ಕವನಗಳಲ್ಲಿ ಎಂಬುದು ನನ್ನ ಭಾವನೆ. ಆದರೆ ಬರಿಯ ಭಾವುಕತೆಯೇ ಕಾವ್ಯವಾಗುವುದಿಲ್ಲ. ಬರಿಯ ನಾದವೇ ಸಂಗೀತವಾಗುವುದಿಲ್ಲ. ಕವಿ ಚೇತನದ ಭಾವೋತ್ಕರ್ಷವೇ ಸಹೃದಯ ಹೃದಯಸ್ಥ ಸ್ಥಾಯಿಯ ಜಾಗ್ರತಿಗೆ ಕಾರಣವಾಗಿ, ತನ್ಮೂಲಕ ರಸನಿಷ್ಪನ್ನ ಗೊಳಿಸುವ ಸಾಧನವಾಗುವುದರಿಂದ ಭಾವತೀವ್ರತೆ ಅಗತ್ಯವೂ ಹೌದು, ಅನಿವಾರ್ಯವೂ ಹೌದು.

**ಪ್ರ.: ನಿಮ್ಮ ಮೆಚ್ಚಿನ ಕವಿ ಯಾರು?**

ಉ.: ಕುವೆಂಪು

**ಪ್ರ.: ನಿಮ್ಮ ಮೇಲೆ ಪ್ರೇರಣೆ ನೀಡಿದ ಹಿರಿಯ ಸಾಹಿತಿಗಳು ಯಾರು?**

ಉ.: ಅನಕೃ, ಎಂ.ಆರ್.ಶ್ರೀ., ಕಟ್ಟೀಮನಿ ಮತ್ತು ಎಸ್.ಎಲ್. ಭೈರಪ್ಪ.

**ಪ್ರ.: ನಿಮಗೆ ತೃಪ್ತಿ ತಂದಿರುವ ಕವನದ ಹೆಸರು ಹೇಳಿ? ಅದಕ್ಕೆ ಕಾರಣವೇನಾದರೂ ಇದೆಯೇ?**

ಉ.: ನನ್ನ 'ಶಿವಾರ್ಪಣೆ' ಅಥವಾ 'ಬೃಂದಾವನ ಲೀಲೆ'. ಅದರಲ್ಲಿ ಪ್ರಕೃತಿ ಮತ್ತು ಪರಮಾತ್ಮರ ಬಗೆಗಿನ ಅನನ್ಯ ಭಕ್ತಿ ಇದೆ. ಅಭೂತಪೂರ್ವ ಕಲ್ಪನೆ ಅಡಗಿದೆ. ಆ ಗೀತೆಯ ಪದಪದದಲ್ಲೂ ನಾನು ಕರಗಿ ನೀರಾಗಿದ್ದೇನೆ. ಭಕ್ತಿ, ಪ್ರೀತಿ, ಬದುಕಿನ ಬಗೆಗಿನ ಒಲವು ಎಲ್ಲವೂ ಗರ್ಭೀಕರಿಸಿಕೊಂಡಿವೆ. ಅದಕ್ಕೇ ಅದು ಚೆನ್ನು.

**ಪ್ರ.: ತರುಣ ಬರಹಗಾರರಿಗೆ ನಿಮ್ಮ ಸಂದೇಶವೇನು?**

ಉ.: ಅನುಭವ ಗಟ್ಟಿಗೊಳ್ಳಬೇಕು. ಹಸಿ ಬಿಸಿ ಭಾವಗಳನ್ನು ಪದ್ಯಪಾತ್ರೆಯಲ್ಲಿ ಬಸಿಯ ಹೋಗಬಾರದು. ಸ್ವೋಪಜ್ಞತೆಯನ್ನು ಅಂದರೆ ಎಲ್ಲದರಲ್ಲೂ ತನ್ನ 'ಸ್ವಂತಿಕೆ'ಯನ್ನು ಸಾಧಿಸಿಕೊಳ್ಳಬೇಕು, ಸಿದ್ಧಿಸಿಕೊಳ್ಳಬೇಕು. ಯಾವುದೇ ಬಣ ಪಂಥಗಳ ತೊತ್ತಾಗಬಾರದು.

**ಪ್ರ.: ಮುಂದಿನ ನಿಮ್ಮ ಕೃತಿ ಯಾವುದು?**

ಉ.: ಕಲಾಸಮೀಕ್ಷೆ ಮತ್ತು ಅನ್ವಯಿಕ ಕಾವ್ಯ ಮೀಮಾಂಸೆ ? (applied poetics)

**ಪ್ರ.: ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆ ಬಗೆಗೆ ನಿಮ್ಮ ಅನುಭವ ಏನು?**

ಉ.: ಸೋತದ್ದು. ನನ್ನ ಆತ್ಮದಾತ್ಮವಾಗಿದ್ದ ಡಾ. ಪುಟ್ಟಶಂಕರಪ್ಪನವರು ಮಾತ್ರ ಆ ಬಗೆಗಿನ ಉಳಿದೆಲ್ಲ ಅನುಭವವನ್ನು ಹಂಚಿಕೊಳ್ಳಬಲ್ಲರು.

**ಪ್ರ.: ನೀವು 'ರಾಗಿಣಿ' ಹೆಸರಿನ ಪ್ರಕಾಶನ ಸಂಸ್ಥೆಯೊಂದನ್ನು ನಡೆಸುತ್ತಿದ್ದೀರಿ. ಪುಸ್ತಕ ಪ್ರಕಾಶನದ ಸಮಸ್ಯೆಗಳನ್ನು ಹೇಳಿ**

ಉ.: ಬೇಕಾದಷ್ಟು ! ಬೊಗಸೆ ತುಂಬುವಷ್ಟು ! ಮಡಿಲು ಹಿಡಿಸುವಷ್ಟು! ಸರ್ಕಾರ ಕೊಳ್ಳುತ್ತೆ, ಪುಸ್ತಕ ಪ್ರಕಟವಾದ ಮೂರು ವರ್ಷಗಳ ಮೇಲೆ. ಅದೂ 150 ಅಥವಾ 300 ಪ್ರತಿಗಳನ್ನು. ಅಷ್ಟು ವೇಳೆಗಾಗಲೇ ನಮ್ಮ ಪುಸ್ತಕಗಳು 'ತೂಕಕ್ಕೆ' ಹೋಗಿರುತ್ತವೆ. ಪುಸ್ತಕ ಮಾರಾಟಗಾರರು ಶೇ. 40ರಿಂದ 50ರಷ್ಟು ರಿಯಾಯತಿ ಕೇಳುತ್ತಾರೆ. ಕೊಟ್ಟರೂ ಹಣ ಕಾಣುವುದು ಆರು ತಿಂಗಳ ಮೇಲೆ. ಹೀಗೆ...

**ಪ್ರ.: ಪುಸ್ತಕ ಪ್ರಕಟನೆ ಲಾಭದಾಯಕವಾಗಲು ನಿಮ್ಮ ಸಲಹೆಗಳೇನು?**

ಉ.: ಕೇರಳದಲ್ಲಿ ಪ್ರಚಾರದಲ್ಲಿರುವಂತೆ ಪುಸ್ತಕ ಪ್ರಕಟವಾದ ಮರುದಿನೇ (ಉತ್ತಮ ಕೃತಿಯಾಗಿದ್ದರೆ) ಮಾತ್ರ ಸರ್ಕಾರ ಇಂತಿಷ್ಟು ಪ್ರತಿಗಳನ್ನು ಕೊಂಡುಕೊಂಡು ಹಣ ಪಾವತಿ ಮಾಡಬೇಕು. ಆಗಾಗ ಪುಸ್ತಕ ಪ್ರದರ್ಶನ ಪ್ರಚಾರ ಕಾರ್ಯಗಳನ್ನು ನಡೆಸಿ, ಸಾರ್ವಜನಿಕರಲ್ಲಿ ಪುಸ್ತಕಕೊಳ್ಳುವ, ಓದುವ ಅಭಿರುಚಿ ಬೆಳೆಯುವಂತೆ ಮಾಡಬೇಕು. ಗ್ರಂಥಾಲಯಗಳ ಮೇಲ್ವಿಚಾರಣೆ ಅತ್ಯಗತ್ಯ.

**ಪ್ರ.: ಕನ್ನಡನಾಡಿನಲ್ಲಿ ಕನ್ನಡ ಭಾಷೆ ಅನಾಥವಾಗಿದೆ ಎಂದು ಎಲ್ಲರೂ ಹೇಳುತ್ತಾರೆ. ಕನ್ನಡದ ಬೆಳವಣಿಗೆಯ ಬಗ್ಗೆ ನಿಮ್ಮಲ್ಲಿ ಏನಾದರೂ ಸೂತ್ರ ಇದೆಯೇ?**

ಉ.: ನನಗೆ ಹಾಗನ್ನಿಸುವುದಿಲ್ಲ. ಕೇವಲ ಐದು ದಶಕದಲ್ಲಿ ಐದುನೂರು ವರ್ಷಗಳಲ್ಲಿ ಆಗದಿರುವಷ್ಟು ಬೆಳವಣಿಗೆ ಆಗಿದೆ ಸಾಹಿತ್ಯಕವಾಗಿ ಸಂಪರ್ಕ ಸಂವಹನ ಮಾಧ್ಯಮವಾಗಿ. ಬೆಳವಣಿಗೆ ನಿಧಾನ ಇರಬಹುದು; ಇದೆ. ಅದು ಅನಿವಾರ್ಯ. ಶತಮಾನದ ಬೌದ್ಧಿಕ ದಾಸ್ಯ ಮಾನಸಿಕ ವಿಕಾಸಕ್ಕೆ ಎಡೆಮಾಡಿಕೊಡುತ್ತಿಲ್ಲ. ಅದು ಕ್ರಮೇಣ ಆಗುತ್ತದೆ. ಇದು ನನ್ನ ಆಶಾವಾದ.

•

## ಅಗಲಿಕೆ

ಅಸೋಸಿಯೇಷನ್‌ನ ಸದಸ್ಯರಾದ ಡಾ। ಬಿ. ಆರ್. ಮಂಜುನಾಥ್ ಅವರ ತಾಯಿ, ಶ್ರೀಮತಿ ಬಳಿಗೆರೆ ಸೀತಮ್ಮನವರು ತುಂಬು ಜೀವನ ನಡೆಸಿ ತಮ್ಮ 91ನೆಯ ವಯಸ್ಸಿನಲ್ಲಿ ಗುರುವಾರ ನವೆಂಬರ್ 11, 2004ರಂದು ಬೆಂಗಳೂರಿನಲ್ಲಿ ಸ್ವರ್ಗಸ್ಥರಾದರು. ಇವರು ನರಸಿಂಹರಾಜಪುರದ ಖ್ಯಾತ ಸಂಸ್ಕೃತ ವಿದ್ವಾಂಸರಾದ ಪಂಡಿತ ಹೊಸಕೆರೆ ನಾಗಪ್ಪಶಾಸ್ತ್ರಿಗಳ ಮಗಳು ಮತ್ತು ಬೆಂಗಳೂರಿನ ಖ್ಯಾತ ಅಡ್ವೋಕೇಟ್‌ರಾಗಿದ್ದ ಶ್ರೀ ಬಳಿಗೆರೆ ರಾಮಚಂದ್ರ ರಾಯರ ಧರ್ಮಪತ್ನಿ. ಇವರಿಗೆ 4 ಹೆಣ್ಣು ಮತ್ತು 3 ಗಂಡು ಮಕ್ಕಳು. ಎಲ್ಲರಿಗೂ ಗಂಡು ಹೆಣ್ಣೆಂಬ ಭೇದವಿಲ್ಲದೆ ಅತ್ಯುತ್ತಮ ವಿದ್ಯಾಭ್ಯಾಸವನ್ನು ಮಾಡಿಸಿದ್ದರು. ಇವರು ಪರಮ ಗಾಂಧಿ ಭಕ್ತರು ಹಾಗೂ ಶ್ರೀರಾಮ ಭಕ್ತರೂ ಆಗಿದ್ದರು.

ಡಾ। ಮಂಜುನಾಥ್‌ರವರಿಗೂ ಅವರ ಬಂಧುಗಳಿಗೂ ಈ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತಾ, ನೇಸರು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

No. TECH/47-202/MBI/2003-05
Date of Posting : 10-12-2004

# ಕೃಷಿಯ ಬೀಡು ಜ್ಞಾನ ಸಿರಿಯ ಗೂಡು, ಮಾಹಿತಿಯ ಜಾಡು ಅದುವೇ ಕನ್ನಡ ನಾಡು

# 49ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

**ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಸೌರಭ ಎಲ್ಲೆಡೆ ಸೂಸಲು ಅಹರ್ನಿಶಿ ದುಡಿದ ಎಲ್ಲ ಸಾಹಿತಿ, ಕವಿ, ಕಲಾವಿದ, ಬರಹಗಾರ ಚೇತನಗಳಿಗೆ ನಾಡಿನ ಜನತೆಯ ಗೌರವ ನಮನ.**

## ಸಾಂಸ್ಕೃತಿಕ ಪರಂಪರೆಯ ಪೋಷಣೆ

★ ಸಮಗ್ರ ವಚನ ಸಾಹಿತ್ಯವನ್ನು ಪುಸ್ತಕ, ಸಿ.ಡಿ.ಯಲ್ಲಿ ಅಳವಡಿಸಲಾಗುವುದು. 1,000 ವಚನ ಗೀತೆಗಳನ್ನು ಸಂಗೀತಕ್ಕೆ ಅಳವಡಿಸಿ ಸಿ.ಡಿ. ರೂಪದಲ್ಲಿ ತರಲಾಗುವುದು. ಎಲ್ಲಾ ಕಲೆಗಳನ್ನು ಒಂದೇ ಸೂರಿನಡಿ ತರುವ ಕಲಾಗ್ರಾಮ ಯೋಜನೆ.

★ ರಾಷ್ಟ್ರಕವಿ ಕುವೆಂಪು ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಅನುಷ್ಠಾನಗೊಂಡಿರುವ ಕೆಲವು ಯೋಜನೆಗಳು 1, ದಿನಾಂಕ 29-12-2003 ರಿಂದ ದಿನಾಂಕ 28-12-2004ರ ವರೆಗಿನ ಅವಧಿಯನ್ನು ವಿಶ್ವಮಾನವ ವರ್ಷ ಎಂದು ಘೋಷಿಸಲಾಗಿದೆ. 2 ಜಯಭಾರತ ಜನನಿಯ ತನುಜಾತೆ ಗೀತೆಯನ್ನು ನಾಡಗೀತೆಯಾಗಿ ಘೋಷಿಸಲಾಗಿದೆ. 3. ಶ್ರೀ ರಾಮಾಯಣ ದರ್ಶನಂ ಕೃತಿಯ ಇಂಗ್ಲೀಷ್ ಭಾಷಾಂತರವನ್ನು ಪ್ರಕಟಿಸಲಾಗಿದೆ. 4. ಕುವೆಂಪು ಅವರ ಭಾವಚಿತ್ರವಿರುವ ಅಂಚೆ ಕವರುಗಳನ್ನು ಬಿಡುಗಡೆ ಮಾಡಲಾಗಿದೆ.

★ ದಿನಾಂಕ 23-10-2004ರಂದು ಚಿತ್ರಕಲಾ ಪರಿಷತ್‌ನಲ್ಲಿ ಡಾ. ರೋರಿಕ್ ಶತಮಾನೋತ್ಸವದ ಉದ್ಘಾಟನಾ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಸಂರಕ್ಷಿತ ರೋರಿಕ್ ನಿವಾಸವನ್ನು ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಲಾಕೃತಿಗಳ ಪ್ರದರ್ಶನ ಹಾಗೂ ಕಲಾ ಶಿಬಿರಗಳು. ಸಾಂಸ್ಕೃತಿಕ ಡೈರೆಕ್ಟರಿ : ರಾಜ್ಯಾದ್ಯಂತ ಎಲ್ಲಾ ಜಾನಪದ ಮತ್ತು ಇತರ ಕಲಾವಿದರ ಮಾಹಿತಿ ಕಂಪ್ಯೂಟರ್‌ನಲ್ಲಿ ಅಳವಡಿಕೆ. (ಪ್ರಾಚ್ಯವಸ್ತುಗಳ ಡೈರೆಕ್ಟರಿ ಮೂಲಕ ರಾಜ್ಯದ ಮೂರು ಸಾವಿರಕ್ಕೂ ಹೆಚ್ಚು ಐತಿಹಾಸಿಕ ಸ್ಮಾರಕಗಳು ಹಾಗೂ ಎಲ್ಲಾ ವಸ್ತುಸಂಗ್ರಹಾಲಯಗಳ ಬಗ್ಗೆ ಮಾಹಿತಿ ಹಾಗೂ ಭಾವಚಿತ್ರಗಳು ಕಂಪ್ಯೂಟರ್‌ನಲ್ಲಿ ಅಳವಡಿಕೆ)

★ ಯುವಜನರಲ್ಲಿ ನಾಡಿನ ಸಂಸ್ಕೃತಿ ಬಗ್ಗೆ ಒಲವು ಹಾಗೂ ಹೆಮ್ಮೆ ಮೂಡಿಸಲು ರಾಷ್ಟ್ರೀಯ ಸೇವಾ ಯೋಜನೆಯ ಒಂದು ಲಕ್ಷ ವಿದ್ಯಾರ್ಥಿಗಳನ್ನು ಸ್ಮಾರಕಗಳ ರಕ್ಷಣೆಯಲ್ಲಿ ತೊಡಗಿಸುವಿಕೆ.

**ಕನ್ನಡಕ್ಕೆ ಹೆಚ್ಚಿನ ಒತ್ತಾಸೆ.**

★ 1ರಿಂದ 10ನೇ ತರಗತಿಯವರೆಗಿನ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಬಿ.ಇ. ಎಂ.ಬಿ.ಬಿ.ಎಸ್. ಮತ್ತು ಬಿ.ಡಿ.ಎಸ್. ಕೋರ್ಸುಗಳ ಪ್ರವೇಶದಲ್ಲಿ ಶೇ 5ರಷ್ಟು ಸಮಾನಾಂತರ ಒಳಮೀಸಲಾತಿ.

★ ವೃತ್ತಿ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಇತರ ಕೋರ್ಸುಗಳಿಗೂ ಶೇ. 5ರಷ್ಟು ಸಮಾನಾಂತರ ಮೀಸಲಾತಿಯ ವಿಸ್ತರಣೆ.

★ 1ರಿಂದ 10ನೇ ತರಗತಿಯವರೆಗಿನ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಸರಕಾರಿ ಉದ್ಯೋಗಗಳಲ್ಲಿ ಶೇ. 5ರಷ್ಟು ಸಮಾನಾಂತರ ಒಳ ಮೀಸಲಾತಿ.

★ ಯಾಂತ್ರಿಕ ಮತ್ತು ವೈದ್ಯಕೀಯ ಪದವಿ ಕೋರ್ಸುಗಳ ಮೊದಲ ವರ್ಷದಲ್ಲಿ ಒಂದು ಪತ್ರ ವಿಷಯವಾಗಿ ಕನ್ನಡದ ಅಳವಡಿಕೆ.

★ ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ಕನ್ನಡೀಕರಣಕ್ಕಾಗಿ ಐದು ಅಂಶಗಳ ಸೂಚನೆಯ ಅನುಷ್ಠಾನ.

★ ಪದವಿಪೂರ್ವ ತರಗತಿಯಲ್ಲಿ ಐಚ್ಛಿಕ ಕನ್ನಡ ವಿಷಯ ಪ್ರಾರಂಭ.

**ಸುವರ್ಣ ಕರ್ನಾಟಕದ ವರ್ಷ 2006-07**

**ಕರ್ನಾಟಕ ವಾರ್ತೆ**

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938